೩೨೧

ಉಪನ್ಯಾಸ
ಗ್ರಂಥಮಾಲೆ

ಜನಪದ ಸಾಹಿತ್ಯದಲ್ಲಿ ಹಾಸ್ಯ

ಮೃತ್ಯುಂಜಯ ಹೊರಕೇರಿ

ಕರ್ನಾಟಕ ವಿಶ್ವವಿದ್ಯಾಲಯ
ಧಾರವಾಡ
ಮಾರ್ಚ, ೧೯೮೨

ಉಪನ್ಯಾಸ ಗ್ರಂಥಮಾಲೆ

೩೨೧

ಜನಪದ ಸಾಹಿತ್ಯದಲ್ಲಿ ಹಾಸ್ಯ

ಮೃತ್ಯುಂಜಯ ಹೊರಕೇರಿ

ಪ್ರಸಾರಾಂಗ

ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಮಾರ್ಚ, ೧೯೮೨

ಪ್ರಕಾಶಕರು :

ಸಿ. ಎಸ್. ಕಣವಿ
ನಿರ್ದೇಶಕರು,
ಪ್ರಸಾರಾಂಗ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ–೫೮೦ ೦೦೩

ಪ್ರಥಮ ಮುದ್ರಣ : ೫,೦೦೦ ಪ್ರತಿಗಳು
ಮಾರ್ಚ ೧೯೮೨

ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಬೆಲೆ : ೫೦ ಪೈಸೆ

ಮುದ್ರಕರು :

ಎಂ. ಎಸ್. ಹಿರಿಯಣ್ಣಯ್ಯ
ನಿರ್ದೇಶಕರು,
ಕರ್ನಾಟಕ ವಿಶ್ವವಿದ್ಯಾಲಯ ಮುದ್ರಣಾಲಯ
ಧಾರವಾಡ–೫೮೦ ೦೦೩

ನನ್ನ ಮಾತು

ಆಂಧ್ರ ಪ್ರದೇಶದ ಆದೋನಿ ತಾಲೂಕಿನ ಕೌತಾಳಂ ಎಂಬ ಊರಲ್ಲಿ ಕರ್ನಾಟಕ ವಿಶ್ವವಿದ್ಯಾಲಯದ ವ್ಯಾಸಂಗ ವಿಸ್ತರಣ ಶಿಬಿರದಲ್ಲಿ ದಿನಾಂಕ ೧೨-೨-೧೯೭೮ ರಂದು "ಜನಪದ ಸಾಹಿತ್ಯದಲ್ಲಿ ಹಾಸ್ಯ" ಎಂಬ ವಿಷಯುವಾಗಿ ಮಾಡಿದ ಭಾಷಣದ ಬರವಣಿಗೆ ಇದಾಗಿದೆ. ಕೌತಾಳಂ ಸಂಪೂರ್ಣ ಕನ್ನಡ ಪ್ರದೇಶವಾಗಿದ್ದರೂ ಆಂಧ್ರ ಪ್ರದೇಶದಲ್ಲಿ ಸೇರಿ ಬಿಟ್ಟಿದೆ. ಅಲ್ಲಿ 'ಕನ್ನಡ ಸಂಘ'ದ ಯುವ ಸ್ನೇಹಿತರ ಬಳಗ ದಲ್ಲಿ ಅತಿಥಿಯಾಗಿದ್ದು ಅವರ ಅಭಿಮಾನ – ಆದರಗಳನ್ನು ಮರೆಯುವಂತಿಲ್ಲ.

ಇಲ್ಲಿ ಜಾನಪದ ಹಾಸ್ಯದ ಬಗೆಗೆ ಸಹಜವಾಗಿ ನನಗೆ ಅನಿಸಿದ್ದನ್ನು ತಿಳಿಸಿರುವೆ. ಜಾನಪದದ ಬಗೆಗೆ ಬರೆಯುವದು ಅಷ್ಟೊಂದು ಸುಲಭಲ್ಲವಾದರೂ ಪ್ರಯತ್ನಿಸಿರುವೆ. ಯಾವ ಗೊಂದಲವನ್ನುಂಟು ಮಾಡದೆ ಸಹಜಾವಲೋಕನ ಗೈಯ ಲಾಗಿದೆ. ಬರೆಯುವದು ಸಾಕಷ್ಟಿದ್ದರೂ ಇಲ್ಲಿ ಸಾಧ್ಯವಿಲ್ಲ. ಸಾಧ್ಯವಾದಷ್ಟು ಜಾನಪದ ಸವಿಯನ್ನು ಅನುಭವಿಸಲು ಯತ್ನಿಸಲಾಗಿದೆ. ಆ ಯತ್ನವನ್ನು ಮೆಚ್ಚಿದರೆ ಸಾಕು.

ಇಂಥ ಅವಕಾಶವನ್ನು ಒದಗಿಸಿಕೊಟ್ಟ ಕ.ವಿ.ವಿ. ಪ್ರಸಾರಾಂಗ ವಿಭಾಗದ ನಿರ್ದೇಶಕರಾದ ಶ್ರೀ ಚೆನ್ನವೀರ ಕಣವಿಯವರಿಗೂ,ಸಹಾಯಕ ನಿರ್ದೇಶಕರಾದ ಶ್ರೀ.ಎಲ್.ಎಂ. ಗುಡ್ಡೀನರವರಿಗೂ, ಮತ್ತು ಕೌತಾಳಂ ಗ್ರಾಮದ ಕನ್ನಡ ಸಂಘದ ಸ್ನೇಹಿತರಿಗೂ ಕೃತಜ್ಞತೆಗಳನ್ನು ಸಲ್ಲಿಸದಿರಲಾರೆ.

ಮೃತ್ಯುಂಜಯ ಹೊರಕೇರಿ

ಭೂ-ವಿಜ್ಞಾನ ಕಾಲೇಜ
ಪಿ.ಜಿ. ಸೆಂಟರ, ನಂದಿಹಳ್ಳಿ
ಸೊಂಡೂರು. (ಬಳ್ಳಾರಿ)

ಮುನ್ನುಡಿ

ಕರ್ನಾಟಕ ವಿಶ್ವವಿದ್ಯಾಲಯವು ತನ್ನ ಪ್ರಸಾರಾಂಗದ ಮುಖಾಂತರ ಕೈಕೊಂಡು ನಡೆಸುತ್ತಿರುವ ಜ್ಞಾನಪ್ರಸಾರದ ಯೋಜನೆಗಳಲ್ಲಿ ಈ 'ಉಪನ್ಯಾಸ ಗ್ರಂಥಮಾಲೆ' ಅತ್ಯಂತ ಮುಖ್ಯವೂ, ಜನಪ್ರಿಯವೂ ಆಗಿರುವುದು ಹೆಮ್ಮೆಯ ಮಾತಾಗಿದೆ. ವಿಶ್ವವಿದ್ಯಾಲಯದ ಆಡಳಿತ ಕ್ಷೇತ್ರದಲ್ಲಿರುವ ಎಂಟು ಜಿಲ್ಲೆಗಳಲ್ಲಿಯೂ ಉಪನ್ಯಾಸ ಶಿಬಿರಗಳನ್ನು ಏರ್ಪಡಿಸ ಲಾಗುತ್ತಿದ್ದು, ವಿಶ್ವವಿದ್ಯಾಲಯದ ಮತ್ತು ಇದಕ್ಕೆ ಸೇರಿದ ಕಾಲೇಜುಗಳ ಪ್ರಾಧ್ಯಾಪಕರು ಸಾಹಿತ್ಯ, ವಿಜ್ಞಾನ, ಸಾಮಾಜಿಕಶಾಸ್ತ್ರ ಮೊದಲಾದ ಶಾಖೆಗಳಿಗೆ ಸಂಬಂಧಪಟ್ಟ ವಿಷಯಗಳನ್ನು ಆಯ್ದುಕೊಂಡು, ಶಾಸ್ತ್ರಸಮ್ಮತವಾದ ಸರಣಿಯಲ್ಲಿ, ಜನಸಾಮಾನ್ಯರಿಗೆ ತಿಳಿಯುವ ಶೈಲಿಯಲ್ಲಿ ಈ ಶಿಬಿರಗಳಲ್ಲಿ ಉಪನ್ಯಾಸಗಳನ್ನು ಕೊಡುತ್ತಾರೆ. ವಿಶ್ವವಿದ್ಯಾ ಲಯದ ಜ್ಞಾನಭಂಡಾರದ ಅಲ್ಪಾಂಶವನ್ನಾದರೂ ಮಹಾ ಜನರ ಮನೆ ಬಾಗಿಲಿಗೆ ಒಯ್ದು ಮುಟ್ಟಿಸಬೇಕೆಂದು ಮಾಡಿದ ಈ ಪ್ರಯತ್ನಕ್ಕೆ ನಮ್ಮ ನಿರೀಕ್ಷೆಗೆ ಮೀರಿದ ಮೆಚ್ಚಿಕೆಯೂ, ಪ್ರೋತ್ಸಾಹವೂ ದೊರೆಯುತ್ತಿವೆ. ಜನರು ತಾವಾಗಿಯೇ ಮುಂದೆ ಬಂದು ತಮ್ಮ ತಮ್ಮ ಊರುಗಳಲ್ಲಿ ಈ ಉಪ ನ್ಯಾಸಗಳನ್ನು ಏರ್ಪಡಿಸಲು ವಿಶ್ವವಿದ್ಯಾಲಯಕ್ಕೆ ಬರೆದು ಬಿನ್ನವಿಸಿಕೊಳ್ಳುತ್ತಿರುವುದು ನಿಜವಾಗಿಯೂ ಸಂತೋಷದ ಸಂಗತಿಯಾಗಿದೆ.

ಈ ಜ್ಞಾನಪ್ರಸಾರದ ಕಾರ್ಯದಲ್ಲಿ ಭಾಗವಹಿಸುವದರಿಂದ ವಿಶ್ವವಿದ್ಯಾಲಯದ ಹಾಗೂ ಕಾಲೇಜುಗಳ ಅಧ್ಯಾಪಕರಿಗೆ ಆಯಾ ಪ್ರದೇಶದ ಜನತೆಯೊಡನೆ ಹೆಚ್ಚಿನ ಸಂಪರ್ಕ ಒದಗುವದಲ್ಲದೆ ಎಂತಹ ವಿಷಯವನ್ನಾದರೂ ಕನ್ನಡದಲ್ಲಿ ತಿಳಿಸಿ ಹೇಳುವ ಹಾಗೂ ಅದನ್ನು ಸುಲಭ ಶೈಲಿಯಲ್ಲಿ ಬರವಣಿಗೆಯಲ್ಲಿಳಿಸುವ ಅವಕಾಶ ದೊರೆಯುತ್ತದೆ. ಈ ಕಾರ್ಯದಲ್ಲಿ ಆವರೆಲ್ಲರೂ ಮನಮುಟ್ಟಿ ಸಹಕರಿಸುತ್ತಿರುವುದು ಶ್ಲಾಘನೀಯ.

ಈ ಮಾಲೆಯಲ್ಲಿ ಈಗಾಗಲೇ ೭೨೦ ಪುಸ್ತಕಗಳು ಪ್ರಕಟವಾಗಿವೆ. ಅವು ಅಚ್ಚಾಗಿ ಹೊರಬಂದೊಡನೆ ಅವುಗಳ ಸಾವಿರಾರು ಪ್ರತಿಗಳನ್ನು ಜನರು ಕೊಂಡು ಓದುತ್ತಾರೆ. ಅನೇಕ ಪುಸ್ತಕಗಳು ನಾಲ್ಕು ಐದು ಮುದ್ರಣಗಳನ್ನು ಕಂಡಿರುವುದು ಈ ಮಾಲೆಯ ಉಪಯುಕ್ತತೆಯನ್ನೂ ಜನಪ್ರಿಯತೆಯನ್ನೂ ವ್ಯಕ್ತಗೊಳಿಸುತ್ತದೆ. ಇದು ನಾಡಿನ ಪ್ರಗತಿಯ ಚಿಹ್ನೆಯೆಂದು ಭಾವಿಸುತ್ತೇನೆ.

ವಿಶ್ವವಿದ್ಯಾಲಯದ ಈ ಸೇವೆಯ ಸಂಪೂರ್ಣ ಪ್ರಯೋಜನ ಪಡೆದು ಸಾಮಾನ್ಯ ಜನತೆ ನಾಡಿನ ಸರ್ವತೋಮುಖ ಪ್ರಗತಿಯಲ್ಲಿ ಪಾಲುಗೊಳ್ಳಲೆಂದು ಹಾರೈಸುತ್ತೇನೆ.

ಕರ್ನಾಟಕ ವಿಶ್ವವಿದ್ಯಾಲಯ
ಧಾರವಾಡ–೫೮೦ ೦೦೩

ಡಿ. ಎಂ. ನಂಜುಂಡಪ್ಪ
ಕುಲಪತಿಗಳು

ಪರಿವಿಡಿ

೧ ಜನಪದ ಸಾಹಿತ್ಯ

ಜೀವನವು ಸುಖ-ದುಃಖ, ನೋವು-ನಲಿವು, ಸಂತೋಷ-ಅಸಂತೋಷ, ಮುಂತಾದ ದ್ವಂದ್ವಗಳ ಕಲಬೆರಕೆಯಾಗಿದೆ. ಇದನ್ನರಿತ ಕವಿ 'ಸಮರಸವೇ ಜೀವನ' ಎನ್ನಬೇಕಾಯಿತು. ಜೀವನವನ್ನು ಹೀಗೆ ಕರೆಯಬೇಕಾದರೆ ಆತ ಜೀವನದಲ್ಲಿ ಸಾಕಷ್ಟು ಅನುಭವಗಳನ್ನು ಹೊಂದಿರಬೇಕು. ಆ ಅನುಭವದ ಅಭಿವ್ಯಕ್ತಿಯೇ ಸಮರಸ ಜೀವನದ ಸರಸ ಸಾಹಿತ್ಯ.

ಈ ಜೀವನಾನುಭವದ ಸ್ಪಷ್ಟ ಅಭಿವ್ಯಕ್ತಿ ನಗರದ ನಾಗರಿಕತೆಯ ನಾಜೂಕಿಗಿಂತಲೂ ಹಳ್ಳಿಯ ನಿರಕ್ಷರ ಕುಕ್ಷಿಗಳಲ್ಲಿ ಹೆಚ್ಚಾಗಿ ಕಾಣುತ್ತೇವೆ. ಇದನ್ನು ಡಾ. ಹಾ. ಮಾ. ನಾಯಕರು ಹೀಗೆ ಹೇಳಿದ್ದಾರೆ. "ಜನಪದ ಸಮಾಜ ಗ್ರಾಮೀಣ ಸಮಾಜ, ನಗರದಿಂದ ಭಿನ್ನವಾದುದು. ಜನಪದ ಜೀವನ, ನಿರಕ್ಷರಸ್ಥ ಸಮಾಜ ಜೀವನ; ಅಕ್ಷರಸ್ಥ ಆಧುನಿಕ ಸಮಾಜದಿಂದ ಬೇರೆಯಾದುದು. ಇದೇ ಕಾರಣಗಳಿಂದ ಜನಪದ ಸಾಹಿತ್ಯ ಸಾಮಾನ್ಯ ಅರ್ಥದ ಸಾಹಿತ್ಯದಿಂದ ಉದ್ದೇಶದಲ್ಲಿ, ವ್ಯಾಪ್ತಿಯಲ್ಲಿ, ಸ್ವರೂಪದಲ್ಲಿ ಪ್ರತ್ಯೇಕವಾದುದು. ಇವುಗಳಲ್ಲಿ

ಉದ್ದಕ್ಕೂ ವೈದೃಶ್ಯ ಕಾಣುತ್ತದೆ.¹" ಜನಪದರು ಅನ್ಯಪ್ರಭಾವೀ ವಲಯಕ್ಕೆ ಒಳಗಾಗದೆ ತಮ್ಮ ಬದುಕಿನುದ್ದಕ್ಕೂ, ಹಾಸಿಗೆಯಿದ್ದಷ್ಟೇ ಕಾಲು ಚಾಚುವ'-ಅಂದರೆ ಸ್ವಂತಿಕೆಯ ಹಿರಿಮೆಯಲ್ಲಿ ಅವರು ಬಾಳುತ್ತಾರೆ. ಹೀಗೆ ಅವರು ಬಾಳುತ್ತಿರುವಾಗ ತಮ್ಮ ಬಾಳಿನ ಕಾಯಕದ ಹಿರಿಮೆಯಲ್ಲಿ ಆಸರಿಕೆ-ಬೇಸರಿಕೆಗಳನ್ನು ಕಳೆದುಕೊಳ್ಳಲು ಹಾಡುತ್ತಾರೆ. ಆ ಹಾಡಿನ ಮೂಲಕ ತಮ್ಮ ಮನದ ದುಗುಡವನ್ನು ದೂರ ಮಾಡಿಕೊಳ್ಳುತ್ತಾರೆ.

ಈ ಜನಪದರು ಹೆಚ್ಚಾಗಿ ನಿರಕ್ಷರಿಗಳು. ನಿರಕ್ಷರ ಕುಕ್ಷಿಗಳ ಅನುಭವದ ಅಭಿವ್ಯಕ್ತಿಯೇ ಜನಪದ ಸಾಹಿತ್ಯ. ಇದು ವರ್ಗ-ವರ್ಣ ಭೇದವಿಲ್ಲದೆಯೇ, ಲಾಕ್ಷಣಿಕರ ಲಗಾಮಿಲ್ಲದೆಯೇ ಸ್ವಚ್ಛಂದವಾಗಿ ಹರಿಯುವ ನೀರಿನಂತೆ ಪ್ರವಹಿಸುತ್ತದೆ. ಆ ನೀರು ಎಲ್ಲೋ ಒಂದೆಡೆ ಉಗಮವಾಗಿ ಎಲ್ಲೆಲ್ಲೊ ಹರಿದು ಎಲ್ಲರಿಗೂ ಲಭ್ಯವಾಗುವಂತೆ ಜನಪದ ಹಾಡು ಯಾರೋ ಒಬ್ಬರಿಂದ ಅಭಿವ್ಯಕ್ತಿಗೊಂಡು ಆ ಒಬ್ಬನಿಂದ ಇನ್ನೊಬ್ಬ-ಇನ್ನೊಬ್ಬನಿಂದ ಮಗದೊಬ್ಬ-ಹೀಗೆ ಬಾಯಿಯಿಂದ ಬಾಯಿಗೆ ಹರಿದು ಮೊದಲು ವ್ಯಕ್ತಿಗತವಾಗಿದ್ದು ನಂತರ ಸಮಷ್ಟಿಯ ಸೊತ್ತಾಗುತ್ತದೆ.

ಒಬ್ಬನ ಬಾಯಿಂದ ಮೂಡಿ ಬಂದ ಹಾಡು ಎಲ್ಲರ ಬಾಯಲ್ಲಿಯೂ ನಲಿಯುತ್ತದೆ. ಆ ಒಬ್ಬನ ಹಾಡು ಎಲ್ಲರ ಗಮನ ಸೆಳೆದು ಅದು ಎಲ್ಲರ ಹಾಡೂ ಆಗುತ್ತದೆ. ಆಗ ಅದಕ್ಕೆ ಸಮಷ್ಟಿತ್ವ ದೊರೆಯುತ್ತದೆ. ಅಷ್ಟೊಂದು ಸತ್ವ

೧. ಜಾನಪದ ಸ್ವರೂಪ-ಹಾ. ಮಾ. ನಾಯಕ. ಪುಟ-೩೨.

ವಿದ್ದರೇನೇ ಆ ಹಾಡು ಮೂಲ ವ್ಯಕ್ತಿಯನ್ನು ಮರೆಮಾಚಿ ಸಾಮೂಹಿಕತೆಯನ್ನು ಪಡೆಯುತ್ತದೆ. ಬಹಳವಾದಲ್ಲಿ ಅಂಥ ಹಾಡು ಬೆಂಕಿ ಹುಳುವಿನ ಹಾಗೆ ಮಿಂಚಿ ಮಾಯವಾಗಬಹುದು.

ಕಾಲದ ಲೆಕ್ಕವಿಲ್ಲದೆಯೇ, ನಾಮದ ನಿರ್ದೇಶನವಿಲ್ಲದೆಯೇ, ಬರೀ ಹಾಡು ಮಾತ್ರ ಉಳಿದು-ಬಾಳಿದುದಕ್ಕೆ ಅವರಲ್ಲಿರುವ ಗಟ್ಟಿಗುಣವೇ ಸಾಕ್ಷಿಯಾಗಿರುತ್ತದೆ. ಈ ನಿರಕ್ಷರ ಕುಕ್ಷಿಗಳು ಹಾಡೊಂದನ್ನೇ ಹಾಡಲಿಲ್ಲ. ಅಟ್ಟಕಟ್ಟಿ ಕುಣಿದಿದ್ದಾರೆ. ಒಗಟು ಕಟ್ಟಿ ಕೇಳಿದ್ದಾರೆ. ಒಡಪು ಹೇಳಿ ನಾಚಿದ್ದಾರೆ. ಗಾದೆ ಹೇಳಿ ನೀತಿ ಕಲಿಸಿದ್ದಾರೆ. ಜೊತೆಗೆ ತಮ್ಮ ಗತ್ತಿನ ಲೆಕ್ಕ ಹೇಳಿ ಸುಶಿಕ್ಷಿತ ಜನರ ತಲೆಯನ್ನೇ ಕುಟ್ಟಿದ್ದಾರೆ.

'ಜಾನಪದ' ಜೀವನದ ನಾನಾ ಮುಖಗಳನ್ನು ಕಾಣುವುದು ಹಾಡಿನಲ್ಲಾದರೂ ಸಹಿತ ಅದರ ಇತರ 'ಜನಪದ' ಅಂಗಗಳು ಹಲವಾರಿವೆ. ಅವೆಲ್ಲದರಲ್ಲೂ ಒಂದು ರೀತಿಯ ವೈವಿಧ್ಯ ಕಾಣುತ್ತೇವೆ. ನವರಸ ಮೊದಲುಮಾಡಿ ಜನಪದ ಸಾಹಿತ್ಯದ ಎಲ್ಲ ಪ್ರಕಾರಗಳಲ್ಲಿಯೂ ತಮ್ಮದೇ ಆದ ಕಾವ್ಯ-ವೈಶಿಷ್ಟ್ಯ ಕಂಡು ಬರುತ್ತದೆ. ಅದರಲ್ಲಿ ಸ್ಥೂಲವಾಗಿ ಹಾಸ್ಯದ ಹೊನಲು ಹೇಗೆ ಹರಿದಿದೆ ಎಂಬುದನ್ನೂ ಕಾಣುವದೀಗ ಪ್ರಸ್ತುತ ವಿಷಯವಾಗಿದೆ.

೨. ಜನಪದ ಸಾಹಿತ್ಯದಲ್ಲಿ ಹಾಸ್ಯ

ಕವಿಯಾದವ ಪಂಡಿತನೇ ಇರಲಿ ಪಾಮರನೇ ಇರಲಿ- ಅವರ ಕವಿತೆಗಳಲ್ಲಿ ನವರಸಗಳಲ್ಲಿ ಯಾವುದಾದರೊಂದು

ಇರಬಹುದಾಗಿದೆ. 'ಹಾಸ್ಯ'ವೆಂಬುದು ನವರಸಗಳಲ್ಲಿ ಒಂದು. ನಮ್ಮ ಪ್ರಾಚೀನ ಪುರಾಣಗಳನ್ನು ಮೊದಲು ಮಾಡಿ ಈಗಿನ ನವ್ಯ ಕಾವ್ಯಗಳ ವರೆಗೂ ಕಾವ್ಯದಲ್ಲಿ 'ಹಾಸ್ಯ' ರಸವು ಹಾಸು ಹೊಕ್ಕಾಗಿ ಬಂದಿದೆ. ಜನಪದ ಜೀವನದ 'ಗರತಿ ಹಾಡು' ಗಳಲ್ಲಿ ಅವಳ ಬಾಳಿನ ವಿವಿಧ ಮುಖಗಳು ಪ್ರತಿಬಿಂಬಿತ ವಾದಂತೆ ಹಾಸ್ಯವು ಪ್ರತಿಬಿಂಬಿಸಿದೆ. ಹಾಸ್ಯವು ಹಾಡಿ ಗಿಂತಲೂ ಹೆಚ್ಚಾಗಿ ಬಯಲಾಟ ಸಾಹಿತ್ಯ, ಒಗಟು, ಒಡಪು, ಗಾದೆ, ಕಥೆ, ಪ್ರಾಸಗಳಲ್ಲಿ ಕಂಡು ಬರುತ್ತದೆ.

ಜಾನಪದ ಹಾಸ್ಯದ ಬಗೆಗೆ ದುರ್ಗಾ ಭಾಗವತರು ಹೀಗೆ ಹೇಳಿದ್ದಾರೆ — "ಜಾನಪದ ಹಾಸ್ಯವು ಯಾವುದಾದರೊಂದು ಕೊರತೆ, ಅತಿಶಯುತೆ, ಒರಟುತನ, ಠಕ್ಕು, ಚಮತ್ಕಾರ, ತಮಾಷೆ ಪ್ರಸಂಗಗಳು ಮತ್ತು ಕೆಲವು ವಿಚಿತ್ರ ಪ್ರಾಸಗಳ ಮೇಲೆ ಆಧಾರಿತವಾಗಿರುತ್ತದೆ". ದೈಹಿಕ–ಮಾನಸಿಕ ಸಾಮಾಜಿಕ ಕೊರತೆಗಳೆಂದು ಮತ್ತೆ ವಿಭಾಗಿಸಿದ್ದಾರೆ.[೨]

ಕುರಡ, ಕೆಪ್ಪ, ಕುಂಟ, ಕುರೂಪಿ, ತೊದಲುಗಾರ ಇವರನ್ನೆಲ್ಲಾ ನೋಡಿದಾಗ ಹಾಸ್ಯಮಯವಾಗಿ ಅವರ ಬಗೆಗೆ ನುಡಿಯುತ್ತೇವೆ. ಇದೊಂದು ರೀತಿಯು ಕೀಳು ಹಾಗೂ ಅಸಭ್ಯ ವರ್ತನೆಯು ಹಾಸ್ಯವಾಗುತ್ತದೆಂದು ದುರ್ಗಾ ಭಾಗವ ತರವರು ಹೇಳಿದ್ದಾರೆ. ಆದರೆ ಇವೆಲ್ಲಾ ಅದರ ಮರ್ಮನಾಟು ನುಡಿಗಳಾಗಿ ಪರಿಣಮಿಸಿದರೂ ಜಾನಪದ ದೃಷ್ಟಿಯುಲ್ಲಿ ತಪ್ಪಾಗ ಲಾರದು. ಯಾಕೆಂದರೆ ಆ ಕೊರತೆಯುನ್ನು ಅನುಭವಿಸು ತ್ತಿರುವ ವ್ಯಕ್ತಿಯುನ್ನು ಕಂಡಾಗ ನಾವು ಮಾನವೀಯತೆ

---

೨. ಭಾರತೀಯ ಜಾನಪದ ಸಮೀಕ್ಷೆ–ಪುಟ-೬೩.

ಯಿಂದಾಗಿ ಮರುಕ ಪಡುತ್ತೇವೆ. ಆದರೆ ಆ ವ್ಯಕ್ತಿ ವ್ಯತಿರಿಕ್ತ ವಾಗಿ ವರ್ತಿಸಿದಾಗ ಮಾತ್ರ ಪ್ರತಿಭಟನೆ ಸಲ್ಲಿಸಬೇಕಾಗುತ್ತದೆ. ಆಗ ಪ್ರತಿಭಟನೆಯು ಹಾಸ್ಯವನ್ನು ಅನಿವಾರ್ಯವಾಗಿ ಅವಲಂಬಿಸಿದರೂ ಅದರಲ್ಲಿ ತಿರಸ್ಕಾರದ ದೃಷ್ಟಿಯೇ ಮೇಲಾಗುತ್ತದೆ. ಇಂಥ ದೈಹಿಕ ಕೊರತೆಯು ಹಾಸ್ಯಕ್ಕೆ ಇಂಥವರೇ ಗುರಿಯಾಗುತ್ತಾರೆಂದು ಖಚಿತವಾಗಿ ಹೇಳಲು ಬರುವದಿಲ್ಲ. ದೇವರು ಮೊದಲುಮಾಡಿ ಸಾಮಾನ್ಯನ ವರೆಗೂ ಗುರಿನೆಟ್ಟಿರುತ್ತದೆ. ಗಣಪತಿಯು ಆನೆಮುಖ, ಹನುಮಂತನ ಬಾಲ, ಮುಂತಾದ ದೇವರ ಅಂಗಗಳು ದೈಹಿಕ ಕೊರತೆಯು ಹಾಸ್ಯಕ್ಕೆ ತುತ್ತಾದರೆ ಆಶ್ಚರ್ಯಪಡಬೇಕಾಗಿಲ್ಲ.

ಮೂರ್ಖ, ಸೋಮಾರಿ, ದರಿದ್ರ, ಜೀನ, ಮೈಗಳ್ಳ, ಕಪಟ ಮುಂತಾದ ಗುಣಗಳನ್ನು ಹೊಂದಿದವರು ಮಾನಸಿಕ ಕೊರತೆಯು ಹಾಸ್ಯಕ್ಕೆ ತುತ್ತಾಗುತ್ತಾರೆ. ಅವರ ಮನೋದೌರ್ಬಲ್ಯ ಹಾಸ್ಯ ಮಾಡುವವನಿಗೆ ವಸ್ತುವಾಗುತ್ತದೆ.

ಕ್ಷೌರಿಕ, ಕುಂಬಾರ, ಹೊಲೆಯ, ಗಾಣಿಗ, ಮಾರ್ವಾಡಿ, ವರ್ತಕ, ಮುಂತಾದವರು ಸಮಾಜದ ಒಂದೊಂದು ಅಂಗಗಳು. ಸಾಮಾಜಿಕ ಜೀವನದಲ್ಲಿ ಅವರ ನಡುವಳಿಕೆ ಕಾಯಕಗಳಲ್ಲಿರುವ ಲೋಪ – ದೋಷಗಳನ್ನು ಕಂಡು, ಅಲ್ಲಿರುವ ಸಾಮಾಜಿಕ ಕೊರತೆಯನ್ನು ಗುರುತಿಸಿ ಹಾಸ್ಯವನ್ನು ಸೃಷ್ಟಿಸಬಹುದು.

ಹಾಸ್ಯಕ್ಕೆ ಇಂಥವನೇ ನಾಯಕನೆಂದು ಗೊತ್ತುಪಡಿಸಿರುವದಿಲ್ಲ. ಇಂಥದೇ ವಸ್ತುವೆಂದು ಸ್ಪಷ್ಟವಿಲ್ಲ.

ಇಂಥದೇ ಸಮಯವೆಂದು ನೇಮವಿಲ್ಲ. ಜಾನಪದದಲ್ಲಂತೂ ಶ್ಲೀಲ ಅಶ್ಲೀಲಗಳೆಂಬ ಕಟ್ಟಳೆಗಳಿಲ್ಲ. ಗಂಭೀರ, ವಿರಹ. ರೌದ್ರ, ಶೋಕ, ಸನ್ನಿವೇಶಗಳಲ್ಲಿ ಒಮ್ಮೆಲೇ ಹಾಸ್ಯ ನುಸುಳ ಬಹುದು. ದೇವಾದಿದೇವತೆಗಳು ಹಾಸ್ಯಕ್ಕೆ ಒಳಗಾದರೆಂದು ಮರುಗುವಂತಿಲ್ಲ.

ಇನ್ನು ಮುಂದೆ ಕನ್ನಡ ಜನಪದ ಸಾಹಿತ್ಯದ ಪ್ರಕಾರ ಗಳಾದ ಹಾಡು, ಗಾದೆ, ಒಗಟು, ಒಡಪು, ಕಥೆ. ಪ್ರಾಸ, ಬಯಲಾಟ ಮುಂತಾದ ಪ್ರಕಾರಗಳಲ್ಲಿ ಹಾಸ್ಯವು ಯಾವ ರೀತಿಯಲ್ಲಿ ಮೂಡಿದೆಯೆಂಬುದನ್ನು ನೊಡೋಣ.

೩. ಹಾಡುಗಳಲ್ಲಿ ಹಾಸ್ಯ

ಹೆಂಗಸರ ಹಾಡು: 'ಗರತಿ ಹಾಡು'ಗಳಲ್ಲಿ ಅವಳ ವಿವಿಧ ಮುಖಗಳು ಮೂಡಿ ಬಂದಿವೆಯೆಂದು ಈ ಹಿಂದೆಯೇ ಹೇಳಲಾಗಿದೆ. ಬೀಸುವಾಗ, ಕುಟ್ಟುವಾಗ ನೆರವಿಗೆ ನೆಯ ಗೆಳತಿ ಬೇಕೇಬೇಕು.

ಮನಿಯ ಮುಂದಿನ ಗೆಳತಿ ದನಿಯಗೂಡಿಸ ಬಾರ
ದನಿಸುದ್ದ ನಿನ್ನ ಗುಣಸುದ್ದ! ಗೆಳತೆವ್ವ
ಗುಣಕ ಕಟ್ಟೇನ ಗೆಳತನ.

ಎಂದು ಗರತಿ ತನ್ನ ಗೆಳತಿಯನ್ನು ಹಾಡಿ ಕರೆಯು ತ್ತಾಳೆ. ನೆರವಾಗಲು ಗೆಳತಿ ಬಂದು ಕೈಗೂಡುತ್ತಾಳೆ. ಅವ ಳೊಂದಿಗೆ ತನ್ನ ನೋವು–ನಲಿವುಗಳನ್ನು ಆಕೆ ಹಂಚಿಕೊಳ್ಳು ತ್ತಾಳೆ. ಅವರೀರ್ವರೂ ನಿತ್ಯದ ಕಾಯಕ ಕುರಿತು ಚರ್ಚಿಸು

ತ್ತಾರೆ. ಅವಳ-ಇವಳ ಮಾತುಗಳು ಹಾಡಿನ ರೂಪದಲ್ಲಿ ಮಾಡುತ್ತಲಿರುತ್ತವೆ. ಕೈಯಲ್ಲಿದ್ದ ಕೆಲಸ ಮುಗಿಯ ಬರುತ್ತದೆ. ಅವರಿಬ್ಬರಿದ್ದಲ್ಲಿಗೆ ತಿರುಗುವ ಸ್ವಭಾವದ ಹೆಣ್ಣೊಬ್ಬಳು ಬರುತ್ತಾಳೆ. ಬಂದವಳು ಮಾತಿಗೆ ನಿಲ್ಲುತ್ತಾಳೆ. ಉಳಿದವರಿಗೆ ಕೆಲಸದ ಅವಸರ. ಬಂದವಳಿಗೆ ಕೆಲಸವಿದ್ದರೂ ಮೈಗೆ ಹಚ್ಚಿಕೊಳ್ಳದೇ ಮನೆಮನೆ ತಿರುಗುವ ಅವಳಿಗೆ ಪಾಠ ಕಲಿಸಲು ಪರ್ಯಾಯವಾಗಿ ಗರತಿ ಹೇಳುತ್ತಾಳೆ.

> ತಿಂದೋಡಿ ನಿನಗಂಡ ತಿಂದೇನು ಮಾಡಂದ
> ತಿಂದೇಳು ಮನಿಯ ತಿರಗಂದ! ಉಟ್ಟಸೀರಿ
> ಉಂಗಟಕ ಹಾಕಿ ಹರಿಯಂದ.

ರಸಿಕ ಹೆಣ್ಣೊಬ್ಬಳು ಬಂದವಳನ್ನು ಈ ರೀತಿ ಹಾಸ್ಯಮಯವಾಗಿ ಹಾಡಿಹರಿಸುತ್ತಾಳೆ. ಗಂಡನು ತಿಂದು ಓಡುವವನಾದರೆ ಹೆಂಡತಿಗಾದರೂ ಅದರ ಚಿಂತೆ ಬೇಡವೇ? ತಿಂದು ತಿರುಗುವ ಆ ಹೆಣ್ಣು ನಾಚಿ ತುಟಿಕಚ್ಚಿಕೊಂಡು ಕಾಲುಕೀಳಬೇಕು. ಇಲ್ಲಿ ಹಾಸ್ಯದ ಜೊತೆಗೆ ಬುದ್ಧಿಯ ಮಾತೂ ಅಡಕವಾಗಿವೆ. ತಿರುಗುವ ಹೆಣ್ಣು ಮನೆ ಹಿಡಿದು ಬಾಳುವೆ ಮಾಡಲು ಹಾಸ್ಯದ ಮಾತು ಸಹಾಯಕವೂ ಆಗಿರುತ್ತದೆ.

ಮದುವೆ - ಮಂಗಲಮಯ ಪ್ರಸಂಗಗಳಲ್ಲಂತೂ ಪರಸ್ಪರ ಬೀಗರು-ಬೀಗರಲ್ಲಿ ಸಂವಾದ ರೂಪದ ಹಾಸ್ಯಮಯ-ಅಣಕದ ಹಾಡುಗಳು ಸಾಕಷ್ಟು ಹೊರಬೀಳುತ್ತವೆ. ಮದುವೆ ಕಾರ್ಯ ಪ್ರಾರಂಭವಾಗಿದೆ. ಹೆಣ್ಣು ಮಗಳನ್ನು ಕರೆದು

ಕೊಂಡು ಬೀಗರು ಬಂದಿದ್ದಾರೆ. ಊರ ಹೊರಗೆ ಶಾಲೆಯಲ್ಲೋ, ಅಗಸೆಬಾಗಿಲಲ್ಲೋ ಬೀಡು ಬಿಟ್ಟಿದ್ದಾರೆ. ಗಂಡಿನ ಮನೆಯುವರಿಗೆ ಸುದ್ದಿ ಹೋಗುತ್ತದೆ. ಸನಾದಿಯುವರ ಸುನಾದದೊಡನೆ ಕಳಸಗಿತ್ತಿಯೊಂದಿಗೆ ಹೆಂಗಸರು-ಗಂಡಸರು ಬಂದ ಬೀಗರನ್ನು ಎದುರುಗೊಳ್ಳಲು ಬರುತ್ತಾರೆ.

ದೊಡ್ಡಸ್ತಿಕೆಯನ್ನು ಹೇಳಿಕೊಂಡು ಬಂದ ಬೀಗರನ್ನು ಸಹಜವಾಗಿ ಸ್ವಾಗತಿಸುವ ಬದಲು ಸರಸದ ಮಾತುಗಳಿಗಿಳಿಯುತ್ತಾರೆ. ಬೀಗರ ಎತ್ತು – ಚಕ್ಕಡಿಗಳನ್ನು ಕಾಣುತ್ತಾರೆ. ಅವರ ಸರಸಕ್ಕೆ ಮೂಕ ಪ್ರಾಣಿಗಳುಆಧಾರವಾಗುತ್ತವೆ. ಬಂದ ಬೀಗರ ದೊಡ್ಡಸ್ತಿಕೆಯನ್ನು, ಅವರ ಸ್ವರೂಪವನ್ನು ಅಣಕದಲ್ಲಿ ಬಯಲು ಮಾಡಿ ಬಿಡುತ್ತಾರೆ.

ಸರಕ್ಕ ಸರಿತಲ್ಲ ಬೀಗರ ಸ್ವರೂಪ ತಿಳಿತಲ್ಲ|
ಆನಿ ಬರತಾವಂತ ಆರ ಬಣವಿಯ ಕೊಂಡೆ
ಆನೆಲ್ಲಿ ನಿಮ್ಮ ದಳವೆಲ್ಲಿ|ಸರಕ್ಕ
ಆನೆಲ್ಲಿ ನಿಮ್ಮ ದಳವೆಲ್ಲಿ ಬೀಗಾ
ಬೋಳ್ಹೋರಿ ಮ್ಯಾಲ ಬರತಾರ| ಸರಕ್ಕ
ಒಂಟಿ ಬರತಾವಂತ ಎಂಟು ಬಣವಿಯ ಕೊಂಡೆ
ಒಂಟೆಲ್ಲಿ ನಿಮ್ಮ ದಳವೆಲ್ಲಿ| ಸರಕ್ಕ
ಒಂಟೆಲ್ಲಿ ನಿಮ್ಮ ದಳವೆಲ್ಲಿ ಬೀಗಾ
ಕುಂಟ್ಹೋರಿ ಮ್ಯಾಲ ಬರತಾರ| ಸರಕ್ಕ

ಬಂದ ಬೀಗರ ಹೋರಿಗಳು ಉತ್ತಮವಿದ್ದರೂ ಅವು

ಬೋಲುಕೋಲಿನ, ಕುಂಟುತ್ತಿರುವ ಹೋರಿಗಳಿಂದು ಹಾಸ್ಯಮಯವಾಗಿ ಕರೆದು ಸ್ವಾಗತಿಸುತ್ತಾರೆ.

ಬೀಗರು ಮದುವೆ ಮನೆಗೆ ಬಂದಿದ್ದಾರೆ. ಕಾರ್ಯ ನಡೆದಿದೆ. ಕಂಬಳಿಯಿಂದ ಕಾರ್ಯ ತಡವಾಗಿದೆ. "ಯಾಕೆ ತಡ?" ಎಂದು ಬೀಗರು ಕೇಳುತ್ತಿದ್ದಾರೆ. "ಕಂಬಳಿ ತರಲು ಹೋಗಿದ್ದಾರೆ, ತಡೆಯಿರಿ" ಎಂದು ಹೇಳುವದಿಷ್ಟೇ ಸಾಕು. ಹೆಣ್ಣಿನ ಕಡೆಯುವರ ಉತ್ಸಾಹ ಉಕ್ಕುತ್ತಿದೆ. ಎದುರುಗೊಂಡ ಬೀಗರು ಅಲ್ಲಿಯೇ ಇದ್ದಾರೆ. ಬೋಳುಹೋರಿ, ಕುಂಟುಹೋರಿಗಳೆಂದು ಅಣಕವಾಡಿದವರನ್ನು ಬಂದ ಬೀಗರು ಕೆಣಕುತ್ತಾರೆ.

ಸರಕ್ಕ ಸರಿತಲ್ಲ ಬೀಗರ ಸ್ವರೂಪ ತಿಳಿತಲ್ಲ|
ಹಂದರದೊಳಗ ಮಂದಿ ಬಂದು ಎಟ್ಟೊತ್ತಾಯ್ತು
ಕಂಬಳಿಲ್ಲೇನ ಇವರಲಿ| ಸರಕ್ಕ
ಕಂಬಳಿಲ್ಲೇನ ಇವರಲಿ ಬೀಗತಿ
ಕಂಬಳಿಗ್ಹೋಗ್ಯಾಳ ಮನಿಮನಿಗೆ| ಸರಕ್ಕ

ಮದುವೆಮನೆ ಗದ್ದಲದಲ್ಲಿ ಕಂಬಳಿಗಾಗಿ ಹುಡುಕಾಡುವ ಪರಿಸ್ಥಿತಿ ಬೀಗರ ಹಾಸ್ಯಕ್ಕೆ ವಸ್ತುವಾಗುತ್ತದೆ. ಮಂದಿಯು ಮನೆಮನೆ ತಿರುಗಿ ಕಂಬಳಿ ತರುವವರೆಂದು ಬಿಟ್ಟ ಬಾಣ ಗಂಡಿನ ಕಡೆಯ ಬೀಗರ ಸ್ವರೂಪವನ್ನು ತಿಳಿಯಪಡಿಸುತ್ತದೆ. ಒಟ್ಟಿನಲ್ಲಿ ಅವರ ಸ್ವರೂಪ ಇವರಿಗೆ–ಇವರ ಸ್ವರೂಪ ಅವರಿಗೆ ತಿಳಿಯುತ್ತದೆ. ಹಾಗಿದ್ದಾಗಲೇ ಪರಸ್ಪರ ಸ್ವರೂಪಗಳ ತಿಳುವಳಿಕೆ ಮೇಲೆ 'ಬೀಗತನ' ಉಂಟಾಗಿರು

ತ್ತದೆ. ಎದುರು-ಬದುರು ಹಾಡುಗಳ ಮೂಲಕ ಸಾಮರಸ್ಯ ಬೆಳೆಯುತ್ತಿದೆ. ಆದರೆ ಅದು ಅಪಹಾಸ್ಯವಾಗಿ ಪರಿಣಮಿಸದು.

ಮದುವೆಯ ಕಾರ್ಯ ಮುಗಿಯುತ್ತಿದ್ದಂತೆ ಬೀಗರನ್ನು ಊಟಕ್ಕೆ ಕರೆಯುತ್ತಾರೆ. ಗಂಡಸರು ಊಟ ಮುಗಿಸಿದ ಮೇಲೆ ಹೆಂಗಸರ ಪಂಕ್ತಿ ಪ್ರಾರಂಭವಾಗುತ್ತದೆ. ಎರಡು ಕಡೆಯವರು ಕೂಡಿಯೇ ಊಟಕ್ಕೆ ಕುಳಿತಿರುತ್ತಾರೆ. ಎಲೆ ಹಾಕಿ ಊಟಬಡಿಸುತ್ತಾರೆ. ಸಣ್ಣಗಿಂಡಿಯ ಒಳಗೆ ಚಮಚೆ ಯನ್ನಿಟ್ಟು ಇಡೀ ಪಂಕ್ತಿಗೆ ಸಪ್ಪಳ ಮಾಡುತ್ತ ತುಪ್ಪ ಹಾಕಿದ ನೆವಮಾಡಿ 'ಗಂಟೆ ಬಾರಿಸಿ' ಊಟ ಮಾಡಿರೆಂದು ಸೂಚಿಸಿ ತುಪ್ಪ ನೀಡಿದ ವ್ಯಕ್ತಿ ಮಾಯವಾಗುತ್ತದೆ. ಹೆಣ್ಣಿನ ಪಕ್ಷದವರು ತುಪ್ಪ ನೀಡಿದ ರೀತಿಕಂಡು ಬಾಯಿಗೆ ತುತ್ತು ಒಯ್ಯುತ್ತಿದ್ದಂತೆ ಹಾಸ್ಯ ಚಟಾಕಿ ಹಾರಿಸುತ್ತಾರೆ.

ಚೂರ ಹೋಳಿಗೆ ಮಾಡಿ ಚೂಜಿಲೆ ತುಪ್ಪಾ ನೀಡಿ
ಸೂರಿ ಮಾಡ್ಯಾಳವ್ವ ಬೀಗತಿ|
ಸೂರಿ ಮಾಡ್ಯಾಳವ್ವ ಬೀಗತಿ| ಸರಕ್ಕ
ನಮ್ಮೂರತನಕ ಕೀರುತಿ.

ಅವರ ಹಾಡನ್ನು ಕೇಳಿ ಹೆಣ್ಣಿನ ಪಕ್ಷದವರೆಲ್ಲರೂ ಗಂಡಿನವರತ್ತ ನೋಡಿ ಘೊಳ್ಳೆಂದು ನಗುತ್ತಾರೆ. ಅವರ ನಗು ಗಂಡಿನವರನ್ನು ಕೆಣಕುತ್ತದೆ. ತಮ್ಮ ಬಾಯ ಬತ್ತಳಿಕೆ ಯಿಂದ ತಮ್ಮ ಜೀನತನವನ್ನು ಜರೆದವರಿಗೆ ಬಾಣವೊಂದನ್ನು ಬಿಡಲು ಒಬ್ಬಳು ನಿರ್ಧರಿಸುತ್ತಾಳೆ. ಚೂರು ಹೋಳಿಗೆ ನಿಜ.

ಆದರೆ ಅದೇ ಹೋಳಿಗೆಯನ್ನು ಉಲ್ಲಾಸದಿಂದ ಸವಿಯುವ ರೀತಿ ಕಂಡು ಅಣಕಿಸಬಯಸುತ್ತಾಳೆ.

ಬೀಗತ್ಯೊಳ್ಳಿ ವಳಾತ ಅಡಗೀಯ ಮನಿಕೊಟ್ಟಿ
ಹೋಳಗಿ ಘಳಗಿ ಬಗಲಾಗ| ಸರಕ್ಕ
ಹೋಳಗೆ ಘಳಗಿ ಬಗಲಾಗ ಅವರಣ್ಣ
ನೀಡ್ಲಿಕ್ಕಿಲ್ಲೆಂದು ಕಸಗೊಂಡ

ಹೀಗೆ ನಗುವಿನ ವಾತಾವರಣದಲ್ಲಿ ಊಟ ಮುಗಿಯುವ ವರೆಗೆ ಹಾಡು–ಮಾತುಗಳು ಸಾಗಿರುತ್ತವೆ. ಒಮ್ಮೊಮ್ಮೆ ಮಾತಿಗೆ ಮಾತು ಬೆಳೆದು ಅಪಾರ್ಥಕ್ಕೆಡೆಯಾಗಿ, ಸರಸ ವಿರಸವಾಗಿ ಕೈ–ಕೈಗೆ ಹತ್ತಿ ಮಂಗಲಕರ ಮದುವೆ ಅಮಂಗಲದೊಂದಿಗೆ ಮುಗ್ತಾಯವಾದ ಪ್ರಸಂಗಗಳಿಗೆ ಉದಾಹರಣೆಗಳೂ ಸಿಗುತ್ತವೆ. ಆದರೆ ಹಿರಿಯರಾದವರು ಅಂಥ ಪ್ರಸಂಗಗಳಿಗೆ ಅವಕಾಶ ಕೊಡದೆ ಸುಕಾರ್ಯವನ್ನು ಸುರಳಿತಗೊಳಿಸಿ ಬಿಡುತ್ತಾರೆ.

ಮದುವೆ ಮುಗಿದಿದೆ. ಶುಭದಿನದಂದು ಹೆಣ್ಣು ಗಂಡನ ಮನೆಯ ಹೊಸ್ತಿಲು ಮೆಟ್ಟಿ ಪ್ರವೇಶಿಸುತ್ತಾಳೆ. ಅವಳ ದಾಂಪತ್ಯ ಜೀವನದ ಪ್ರಥಮ ಅಧ್ಯಾಯ ಪ್ರಾರಂಭವಾಗುತ್ತವೆ. ನಾಲ್ಕಾರು ದಿನ ಜೊತೆಯಾಗಿ ಬಂದಿದ್ದ ಓರಗೆಯ ಗೆಳತಿಯರೂ ಹೊರಳಿ ಹೋಗಿದ್ದಾರೆ. ಹುಟ್ಟಿ – ಬೆಳೆದು, ತಂದೆ–ತಾಯಿ, ಬಂಧು–ಬಳಗ ತೊರೆದು ಹೊಸದಾದ ವಾತಾವರಣಕ್ಕೆ ಹೊಂದಿಕೊಳ್ಳಬೇಕು. ಸ್ವಲ್ಪ ಕಸಿವಿಸಿಯಾಗು

ತ್ತದೆ. ಆದರೂ ಅದರಲ್ಲಿಯೇ ಅವ್ಯಕ್ತ ಆನಂದವಿರುತ್ತದೆ ಗಂಡನ ಸಂಗಸುಖದಿಂದ ಆಕೆ ಉತ್ಸಾಹಿತಳಾಗಿದ್ದಾಳೆ. ತವರಿನ ಹಂಬಲವಿದ್ದರೂ ಕೈಹಿಡಿದವನ ಪ್ರಭಾವದ ಪರಿಣಾಮವಾಗಿ ಗೆಲುವಾಗಿದ್ದಾಳೆ. ಆ ಹಂಬಲದ ಬದಲು ಗಂಡ ತನ್ನ ಹಂಬಲ ಹಚ್ಚಿಕೊಳ್ಳಲು ಹೆಂಡತಿಗೆ ಸೂಚ್ಯವಾಗಿ ತಿಳಿಸಿದ್ದಾನೆ. ಅದನ್ನೆ ರಸಿಕ ಹೆಣ್ಣೊಬ್ಬಳು ಈ ರೀತಿ ವ್ಯಕ್ತಪಡಿಸುತ್ತಾಳೆ.

ಹಾಸಿಗಿ ಹಾಸೆಂದಾ ಮಲ್ಲೀಗೆ ಮುಡಿಯೆಂದಾ
ಬ್ಯಾಸತ್ತರ ಮಡದಿ ಮಲಗೆಂದಾ| ನನರಾಯಾ
ತನ ನೋಡಿ ತವರ ಮರಿಯಂದಾ.

ಗಂಡನ ಮನೆಯಲ್ಲಿ ಇಷ್ಟೊಂದು ಸೌಖ್ಯವಿದ್ದವಳಿಗೆ ತವರೂರಿನ ಸೆನಪಾದರೂ ಆಗುತ್ತಿದೆಯೇ ಈ ಹಾಡನ್ನು ಕೇಳಿದಾಗ ಯಾವ ಯುವತಿಯ ಮುಖದಲ್ಲಿ ಮಂದಹಾಸ ಮೂಡಲಿಕ್ಕಿಲ್ಲ ತಾರುಣ್ಯದ ಅವಸ್ಥೆ ಇಂಥ ಬದುಕನ್ನು ಬಿಟ್ಟು ಇನ್ನೇನನ್ನು ಬಯಸುತ್ತಿವೆ? ಇದು ಒಂದು ರೀತಿಯ ಸೊಗಸಾದ ಸರಸ ಸಾಹಿತ್ಯ ಹಾಸ್ಯ.

ದಾಂಪತ್ಯವೆಂದರೆ ಸರಸದ ಜೊತೆಗೆ ವಿರಸವಿದ್ದೇ ಇರುತ್ತದೆ. ಯಾವುದೋ ಕಾರಣದಿಂದ ಬೀಗ – ಬೀಗರಲ್ಲಿ ಮನಸ್ತಾಪವಾಗಿದೆ. ಅದರಿಂದ ವಿರಸಹುಟ್ಟಿಕೊಂಡಿದೆ. ಗಂಡನಿಗೆ ಕೋಪ ಬಂದಿದೆ. ಅದು ಕ್ಷಣಿಕ. ಆದರೂ ಅದನ್ನು ಯಾರ ಮೇಲೆ ತೋರ್ಪಡಿಸಬೇಕು. ಅನವಶ್ಯಕವಾಗಿ ಹೆಂಡತಿ

ಯನ್ನು ಬಡಿಯುತ್ತಾನೆ. ಆವಳು ಮುಸಿದುಕೊಳ್ಳುತ್ತಾಳೆ. ನಂತರ ಅವನ ಮನಸ್ಸು ಕರಗುತ್ತದೆ. ರಾತ್ರಿಯಾಗುತ್ತದೆ. ಹೆಂಡತಿ ಬಂದು ನಿತ್ಯದಂತೆ ಮಲಗದೆ ಆತನಿಗೆ ಬೆನ್ನು ಮಾಡಿ ಕೂಡುತ್ತಾಳೆ. ಆತ ರಮಿಸುತ್ತಾನೆ. ಎಷ್ಟಾದರೂ 'ಗಂಡ-ಹೆಂಡಿರ ಜಗಳ ಉಂಡು ಮಲಗುವ ತನಕ' ಅಲ್ಲವೆ? ಗಂಡನ ಪ್ರೀತಿಯ ಮಾತುಗಳಿಗೆ ಹೆಂಡತಿಯ ಮುನಿಸು ಮಾಯವಾಗುತ್ತದೆ. ಇದನ್ನು ಗಮನಿಸಿದ ಮನೆಯಲ್ಲಿಯ ನಾದಿನಿಯು, ಅತ್ತಿಗೆಯೋ, ತಾಯಿಯೊ ಒಬ್ಬರು ಹಾಡಿ ಬಿಡುತ್ತಾರೆ.

ಮಡದೀಯ ಬಡಿದಾನ ಮನದಾಗ ಮರುಗ್ಯಾನ
ಒಳಗ್ಹೋಗಿ ಸೆರಗ ಹಿಡಿಯುತ | ಕೇಳ್ಯಾನ
ನಾ ಹೆಚ್ಚೊ ನಿನ್ನ ತವರ್ಹೆಚ್ಚೊ|

'ಸರಸವೇ ಜನನ ವಿರಸವೇ ಮರಣ' ಎಂಬ ಕವಿವಾಣಿ ಮಾರ್ಮಿಕವಾಗಿದೆ. ಸರಸದಿಂದ ಒಡಗೂಡಿದ ದಾಂಪತ್ಯ ಜೀವನ ಸ್ವರ್ಗಲೋಕವನ್ನೆ ಮರೆಸುತ್ತದೆ. ಅಲ್ಲವೇ? ಆದರೆ ಅಂಥ ಸರಸಕ್ಕೆ ತಕ್ಕ ಸತಿಬೇಕು. ಆ ಸರಸಸತಿ ಎಂಥವಳಿರ ಬೇಕೆಂಬುದಕ್ಕೆ ಸರ್ವಜ್ಞನು ತನ್ನ ವಿಚಾರ ವಚನವನ್ನೆ ಹೇಳಿದ್ದಾನೆ.

ಬರೀ ಸರಸವಾಡಿದರೆ ಹೊಟ್ಟೆ ತಾಳ ಹಾಕುತ್ತದೆ ಅದಕ್ಕಾಗಿ ಜೀವನಾಧಾರಕ್ಕೆ ಕಾಯಕವೂ ಬೇಕು. ಆ ಕಾಯಕ ದಲ್ಲಿ ಸುಖವಿರಬೇಕು, ತೃಪ್ತಿಯಿರಬೇಕು. ಬದುಕುವ ದಾರಿ

ಹಿಡಿದ ಕಾಯಕಗಳಲ್ಲಿ ಗಂಡ ದರಿದ್ರ ಇಲ್ಲವೆ ಹೆಂಡತಿ ಸೋಮಾರಿ–ಹೀಗೆ ಏನಾದರೂ ಒಂದು ಕೊರತೆ ಇದ್ದೇ ಇರುತ್ತದೆ. ಒಬ್ಬರ ದೋಷವನ್ನು ಎತ್ತಿ ತೋರಿಸುವ ಸಂವಾದ ರೂಪದ ಹಾಡುಗಳಲ್ಲಿ ಹೆಚ್ಚಾಗಿ ಹಾಸ್ಯವೇ ಬೆರೆತಿರುತ್ತದೆ.

ಉದಾ: ಗಂಡ: ನೂಲೊಲ್ಯಾಕ ಚೆನ್ನಿ|
ನೂಲೊಲ್ಯಾಕ ಚೆನ್ನಿ|
ಹೆಂಡತಿ: ರಾಟಲಿಲ್ಲೊ ಜಾಣಾ|
ರಾಟಲಿಲ್ಲೊ ಜಾಣಾ|

ಈ ರೀತಿಯ ಸಂವಾದ ಬೆಳೆಯುತ್ತ ಹೋದಂತೆ ಹಾಸ್ಯವೂ ಬೆಳೆಯುತ್ತದೆ. ಗಂಡ–ಹೆಂಡಿರ ಸಂಭಾಷಣೆಯಲ್ಲಿ ನವಿರಾದ ಹಾಸ್ಯ ಬೆರೆತಿರುತ್ತದೆ. ಸರಸ ಜೀವನಕ್ಕೆ ಹಾಸ್ಯ ಆಹಾರವಾಗುತ್ತದೆ. ಆ ಆಹಾರದಿಂದ ರಸಿಕತೆಗೆ ಚೇತನ ದೊರಕುತ್ತದೆ. ಆ ಚೇತನದಿಂದ ಬಾಳು ಬಂಗಾರವಾಗುತ್ತದೆ. ಬಾಳು ಬಂಗಾರವಾದಾಗ ಇನ್ನೇನು ಬೇಕು?

ಗಂಡಸರ ಹಾಡುಗಳಲ್ಲಿ ಹಾಸ್ಯ ಕಡಿಮೆಯೆಂದು ಭಾವಿಸುವಂತಿಲ್ಲ. ಹೆಂಗಸರ ಹಾಡಿನಲ್ಲಿರುವ ಹಾಸ್ಯದ ಮಿತಿಯನ್ನು ಮೀರಿ ಗಡುಸು ಹಾಸ್ಯ ಅಲ್ಲಿ ಪ್ರಕಟವಾಗಿದೆ. ಹಂತಿ, ಕೋಲಾಟ, ಗೀಗೀ, ಲಾವಣಿ ಮುಂತಾದವುಗಳಲ್ಲಿ ಯಾವುದೋ ಒಂದು ಕಥೆಯನ್ನು ಅಥವಾ ಘಟನೆಯನ್ನು ಮೂಲವಾಗಿಟ್ಟುಕೊಂಡು ಅದರ ಮುನ್ನೋಟದಲ್ಲಿಯೇ ಅವರ ಗಮನವಿರು

ತ್ತದೆ. ತಾಳದ ಗತಿಗೆ ಕುಣಿಯುತ್ತ-ಹಾಡುತ್ತಲಿರುವಾಗ ಹಾಸ್ಯಕ್ಕೆ ಅಲ್ಲಿ ಸ್ಥಳವಕಾಶ ದೊರೆಯದು. ಆದರೂ ಆಗೊಮ್ಮೆ-ಈಗೊಮ್ಮೆ ಎಂಬಂತೆ ಹಾಸ್ಯ ನುಸುಳಿ ಬರುತ್ತದೆ. ಹೋಳಿ ಹಬ್ಬದಲ್ಲಂತೂ ಗಂಡಸರು ಶ್ಲೀಲ-ಅಶ್ಲೀಲಗಳನ್ನು ಲಕ್ಷಿಸುವದಿಲ್ಲ. ಜಾನಪದ ದೃಷ್ಟಿಯಲ್ಲಿ ಶ್ಲೀಲಾಶ್ಲೀಲಗಳ ಭೇದ ಮಾಡುವಂತಿಲ್ಲ. ಅಶ್ಲೀಲವನ್ನು ಅಸಹ್ಯವೆಂದು ಬಗೆವಂತಿಲ್ಲ.

ಸುಗ್ಗಿ ಪ್ರಾರಂಭವಾಗಿದೆ. ಜೋಳದ ತೆನೆ ಮುರಿದು ಕಣದ ತುಂಬ ಹರವಿದ್ದಾರೆ. ರಾತ್ರಿಯಾಗುತ್ತದೆ. ನೆರೆಹೊರೆಯುವರು ತಮ್ಮ ಎತ್ತುಗಳೊಂದಿಗೆ ಕಣಕ್ಕೆ ಬರುತ್ತಾರೆ ಎತ್ತುಗಳ ಹಂತಿ ಕಟ್ಟುತ್ತಾರೆ. ಕಾಳು ನುರಿಯಲು ಬೆಳಗಾಗಬೇಕು. ಅಲ್ಲಿಯವರೆಗೆ ಎಚ್ಚರವಾಗಿದ್ದು ಬೇಸರ ಕಳೆಯಲು ಹಾಡನ್ನು ಹಾಡುತ್ತಾರೆ. ನಡುನಡುವೆ ಆಯಾಸ ಪರಿಹಾರಕ್ಕೆ ಖಾರಹಚ್ಚಿದ ಚೂರಮರಿ ಕರದಂಟಿನ ಸೊಂಪು ಸಿದ್ಧವಾಗಿರುತ್ತದೆ. ಚಹವೂ ಕುದಿಯುತ್ತಲಿದೆ. ಹಂತಿ ಪ್ರಾರಂಭವಾದ ನಂತರ ಬಸವಣ್ಣನ ಕಥೆಯನ್ನೊ, ಮಳೆಯ ಮಲ್ಲೇಶನ ಕಥೆಯನ್ನೊ ಹಾಡಿನಲ್ಲಿ ಹರಿಸುತ್ತಿದ್ದಾರೆ. ಕಥೆ ಬೇಸರ ಬರಬಾರದೆಂದು ಆಗಾಗ ಹಾಸ್ಯ ಚುಟುಕುಗಳನ್ನು ಹಾಡುತ್ತಾರೆ. ಆ ಚುಟುಕುಗಳನ್ನು ಕೇಳಿದರೆ ತೂಕಡಿಕೆ ದೂರ ಓಡುತ್ತದೆ. ಮನ ಮೆಲುಕು ಹಾಕುತ್ತಿರುತ್ತದೆ. ಅದೇ ವೇಳೆಗೆ ಕಣದಲ್ಲಿ ಕಂಕಿ ತೆಗೆಯುವ ಹದ ಬಂದಿರುತ್ತದೆ.

ಜಂತಗುಂಟಿ ಹಿಡಿದು ಕಂಕಿ ತಿರುವಿ ಹಾಕಲು ಕೆಲವರು ಕಣಕ್ಕಿಳಿಯುತ್ತಾರೆ. ಹಾಡುವವರು ಕಥೆಯನ್ನು ಬಿಟ್ಟು ಬೇರೆ ಹಾಡುತ್ತಾರೆ.

ಹುಗ್ಗಿ ಉಣಸ್ಯಾರಂತ ಹಿಗ್ಗಿನಲಿ ನಾ ಬಂದ್ರ
ಡೊಗ್ಗಿಸ್ಯಾರಣ್ಣ ಹಂತೀಗಿ| ಗೌಡ್ರು
ಬಗ್ಗಿಸ್ಯಾರಣ್ಣ ಕಂಕೀಗೆ.

ಈ ಹಾಡು ಕೇಳಿ ಕಂಕಿ ತೆಗೆಯುವವರ ಮುಖದಲ್ಲಿ ಕಿರುನಗೆ ಮೂಡುತ್ತದೆ. ಆಯಾಸದ ಅರಿವಾಗುವದಿಲ್ಲ. ಹಾಡಿನಲ್ಲಿ ಕೊಂಕು ಇದ್ದರೂ ಸಂದರ್ಭಕ್ಕೆ ತಕ್ಕಂತೆ ಬಂಕ ಲಾಸ್ಯವಾಡುವದು. ಹಾಸ್ಯವಾದರೂ ವಾಸ್ತವಿಕ ಪರಿಸ್ಥಿತಿಯನ್ನೆ ಪ್ರಕಟಗೊಳಿಸುವಂತಹುದು.

ಮುದುಕಾ ಮುದುಕಿ ಕೂಡಿ ಮುದ್ಗಲ್ ಸಂತೀ ಗ್ಹೋಗಿ
ಮುದುಕಿ ಬೇಡ್ಯಾಳೊ ತಲಿಲಾಡಿ| ಆ ಮುದುಕ
ಬೇಡಿ ಅಳತಾನೊ ಹುಲಿಗೆಜ್ಜಿ.

ಎಂಬ ಮತ್ತೊಂದು ಚುಟುಕು ಹಾಡುತ್ತಾರೆ. ಹಾಡು ಕಿವಿಗೆ ಬೀಳುತ್ತಲೇ ಕಂಬಳಿ ಹೊದ್ದು ಉರಿಕಾಯಿಸುತ್ತ ಕುಳಿತ ಮುದುಕನ ಮುಖದಲ್ಲಿ ಮಂದಹಾಸ ಮೂಡುತ್ತದೆ. ಹಾಡುಗರತ್ತ ದೃಷ್ಟಿಸಿ ಮೀಸೆ ಹುರಿಗೊಳಿಸುತ್ತಾನೆ. ಹಾಸ್ಯದ ಜೊತೆಗೆ ಶೃಂಗಾರವೂ ಬೆರೆತು ಅದು ಬಲುಮೋಜಿ

ನಿಸುತ್ತವೆ. ಹಾಡುಗರಿಗೆ ಮತ್ತೇನೋ ಹೊಳೆಯುತ್ತದೆ. ಕಂಕಿ ತೆಗೆದು ಹರೆಯದ ಹುಡುಗರು ಸುಂಕ ಮಾಡಿಸುತ್ತ ಹೊರಬರುತ್ತಿದ್ದಾರೆ. ಹಾಡುಗರ ಮೇಳ ಅವರ ಮೇಲೆಯೇ ಹಾಡು ಕಟ್ಟುತ್ತದೆ.

ಹಚ್ಚನ ಹಚ್ಚಿ ಬಟ್ಟು ಉದ್ದನ ಮಲಿಕಟ್ಟು
ಸಿಗದಂತ ಸಣ್ಣ ನಡುಪಿನ| ಎಲೆಬಾಲಿ
ಮುರಕ ಮಾಡಬ್ಯಾಡ ಮುರದೀತು.

ಇವನ್ನು ಕೇಳುತ್ತಲೇ ಆ ಹುಡುಗಿಯ ಮುಖ ಅರಳುತ್ತದೆ. ಕುಡಿಮೀಸೆ ಕುಣಿಯುತ್ತವೆ. ತಂಡಿಗೆ ಕುಗ್ಗಿದ ದೇಹ ಹೆಣ್ಣಿನ ವರ್ಣನೆ ಕೇಳಿ ಉಬ್ಬುತ್ತದೆ. ಆವರಿಸಿದ ನಿದ್ದೆಯ ಮಬ್ಬು ದೂರ ಸರಿಯುತ್ತದೆ. ಮುಂಬರುವ ಹಾಡು ಕೇಳಲು ಕಿವಿಗಳು ನಿಮಿರಿ ನಿಲ್ಲುತ್ತವೆ. ಮನದಲ್ಲಿ ಮೋಜು ಮಲಕಾಡಿಸುತ್ತದೆ. ಇಂಥ ಶೃಂಗಾರ ರಸಭರಿತ ಹಾಸ್ಯಮಯ ಹಾಡುಗಳನ್ನು ಹಾಡುಗರು ಲೀಲಾಜಾಲವಾಗಿ ಸಂದರ್ಭಕ್ಕೆ ತಕ್ಕಂತೆ ಹಾಡಿ ಕಾಲವನ್ನು ನೂಕುತ್ತಾರೆ.

ಹೋಳಿ ಹಬ್ಬದಲ್ಲಂತೂ ಹೆಣ್ಣಿನ ಅಂಗಾಂಗ, ಹಾವ ಭಾವ, ಹಾದರ, ಕಾಮಕೇಳಿ ಮುಂತಾದವುಗಳನ್ನು ವರ್ಣಿಸುವಲ್ಲಿ ಶ್ಲೀಲ–ಅಶ್ಲೀಲಗಳ ಕಟ್ಟಳೆಯಿಲ್ಲ. ತಮ್ಮ ತಮ್ಮ ವಯಸ್ಸಿನ ಮನೋಧರ್ಮಕ್ಕನುಗುಣವಾಗಿ ಹಳ್ಳಿಗರು ಹಾಡಿಕೊಳ್ಳುತ್ತಾರೆ. ಆ ಹಾಡಿನಲ್ಲಿಯೇ ಅವರು ಹರುಷ ಪಡುತ್ತಾರೆ.

೪. ನಗೆಯ ಗಾದೆಗಳು

ಗಾದೆಗಳ ಬಗೆಗೆಯೇ ಗಾದೆಗಳು ಹುಟ್ಟಿಕೊಂಡಿವೆ. 'ಗಾದೆ ವೇದಕ್ಕೆ ಸಮಾನ'ವೆಂದು ಅದರ ಬೆಲೆ ಕಟ್ಟಿದರೆ, 'ಸೋದೆ ರಾಜ್ಯ ಹೋದರೂ ಗಾದೆ ರಾಜ್ಯ ಹೋಗೊದಿಲ್ಲ' ಎಂಬ ಮತ್ತೊಂದು ಗಾದೆ. ಹೀಗೆ ಗಾದೆಗಳ ಗಾದೆ ಚಿರಂಜೀವಿ ಎಂಬುದನ್ನು ಸ್ಪಷ್ಟಪಡಿಸುತ್ತದೆ. ಲೋಕಾಭಿರಾಮವಾಗಿ ಮಾತನಾಡುವಾಗ, ಬಾಯಿಗೆ ಬಾಯಿ ಹತ್ತಿ ಜಗಳ ಕಾಯು ವಾಗ, ವಾದ-ಪ್ರತಿವಾದಗಳನ್ನು ಮಂಡಿಸುವಾಗ ಗಾದೆ ಗಳನ್ನು ಸಂದರ್ಭಕ್ಕೆ ತಕ್ಕಂತೆ ಬಳಸುತ್ತಾರೆ. ಮಾತಿಗೆ ಬೇಕಾದ ಗಾದೆ ನೆನಪಾಗದಿರಲು 'ಅದೇನೊ ಅಂತಾರಲ್ಲ.... ಎಂದು ಗಾದೆಯ ಮೇಲೆ ಭಾರಹಾಕಿಬಿಡುತ್ತಾರೆ. ಮಗ್ಗ ಲಲ್ಲಿದ್ದವರು ಆ ಗಾದೆ ನೆನಪಿಸಿ ಹೇಳುತ್ತಾರೆ. 'ಹೂಂಹೂ.. ಹಾಗಾಯಿತು ನೋಡು' ಎಂದು ತಮ್ಮ ಮಾತಿಗೆ ಸಮರ್ಥನೆ ದೊರಕಿಸಿಕೊಳ್ಳುತ್ತಾರೆ. ಅಷ್ಟೊಂದು ಪರಿಣಾಮಕಾರಕ ಗುಣ ಗಾದೆಗಳಲ್ಲಿ ಅಡಗಿದೆ.

'ಮಾತು ಬಲ್ಲವನಿಗೆ ಜಗಳವಿಲ್ಲ' ಎನ್ನುವದಕ್ಕೆ ಆತ ನಲ್ಲಿರುವ ಗಾದೆಗಳ ಬಳಕೆಯೇ ಸಾಕ್ಷಿಯಾಗುತ್ತದೆ. ವ್ಯಕ್ತಿ ಎಂಥ ದಡ್ಡನಿದ್ದರೂ ಆತನ ಮಾತಿನಲ್ಲಿ ಗಾದೆ ಸಹಜವಾಗಿ ಸುಳಿದುಹೋಗುತ್ತದೆ. ಮಾನವನ ಸ್ವಭಾವವನ್ನು ಅನುಸರಿಸಿ, ದೈಹಿಕ ಕೊರತೆಗಳನ್ನು ಆಧರಿಸಿ, ಉಚ್ಚವರ್ಗದಿಂದ ಹಿಡಿದು ಕೆಳವರ್ಗದ ವರೆಗೂ ಅವು ಹುಟ್ಟಿಕೊಂಡಿವೆ. ಪೌರಾಣಿಕ

ವ್ಯಕ್ತಿ – ಘಟನೆ ಮೊದಲು ಮಾಡಿಕೊಂಡು ಸಾಮಾಜಿಕ ಜೀವನದ ವರೆಗೂ ಅದರ ವ್ಯಾಪ್ತಿ ವಿಸ್ತರಿಸಿದೆ.

ಗಾದೆಗಳಿಂದ ಕೆಲವರಿಗೆ ಆಘಾತವಾಗಬಹುದು. ಕೆಲವರಿಗೆ ಅಸಹ್ಯವಾಗಬಹುದು. ಮತ್ತೊಬ್ಬರನ್ನು ಟೀಕಿಸುವಾಗ ಗಾದೆಗಳು ಹಾಸ್ಯವಾಗಬಹುದು. ಆದರೆ ಅದರಲ್ಲಿ ಸ್ಪಷ್ಟನೀತಿ – ವಸ್ತುಸ್ಥಿತಿ ಅಡಕವಾಗಿರುತ್ತದೆ. ಅವು ಅನುಭವದ ಸಾರಸಂಗ್ರಹವಾಗಿರುತ್ತವೆ. ವಿಶ್ವದ ಪ್ರತಿಯೊಂದು ಬಳಕೆಯ ಭಾಷೆಗಳಲ್ಲಿ ಅಷ್ಟೇ ಅಲ್ಲ, ಸಾಹಿತ್ಯದಲ್ಲಿಯೂ ಗಾದೆಗಳಿದ್ದೇ ಇರುತ್ತವೆ. 'ಆಡು ಮುಟ್ಟದ ಗಿಡವಿಲ್ಲ, ಗಾದೆಯಿಲ್ಲದ ಭಾಷೆಯಿಲ್ಲ' ಎಂದರೂ ಸರಿಹೋದೀತು. ಪರಸ್ಪರ ಭಾವನೆಗಳ ಅಭಿವ್ಯಕ್ತಿಗೆ ಗಾದೆ ಒಂದು ಪ್ರಮುಖ ಮಾಧ್ಯಮವಾಗಿದೆ.

ಹಿರಿದಾದ ಅರ್ಥವನ್ನು ಕಿರಿದಾದ ವಾಕ್ಯದಲ್ಲಿ ಸೆರೆಹಿಡಿದ ಗಾದೆ ಲೋಕಾನುಭವವನ್ನು ಒಳಗೊಂಡಿರುತ್ತದೆ. ಹೆಚ್ಚಾಗಿ ಗಾದೆಗಳಲ್ಲಿ ಕೊಂಕು, ತಿರಸ್ಕಾರ, ಅಪಹಾಸ್ಯಗಳೇ ತುಂಬಿದ್ದು ಅವು ಹಾಸ್ಯಕ್ಕೆ ದಾರಿಮಾಡಿಕೊಡುತ್ತವೆ. ಡಾ. ಜೀ.ಶಂ. ಪರಮಶಿವಯ್ಯನವರ ಮಾತಿನಲ್ಲಿ ಹೇಳುವದಾದರೆ—"ಸಾಮಾನ್ಯವಾಗಿ ಹಾಸ್ಯದ ಹೊರಮೈಯ್ಯಲ್ಲಿ ಪ್ರತಿಗಾದೆಯೂ ವಿಶಿಷ್ಟ ಅರ್ಥದಿಂದ ಕೂಡಿದ್ದು, ಜನರ ನಡೆ, ನುಡಿ, ರೀತಿನೀತಿಗಳನ್ನು ತಿದ್ದಿ ನಡೆಸುವ ಮಂತ್ರಶಕ್ತಿಯನ್ನು ಪಡೆದಿವೆ" ಎಂದಿದ್ದಾರೆ.[೧]

೧. ಜನಪದ ಸಾಹಿತ್ಯ ಸಮೀಕ್ಷೆ–ಜೀ.ಶಂ.ಪ–ಪು–೪೦

ನಾಲ್ಕಾರು ಜನರು ಕೂಡಿಕೊಂಡು ಯಾವುದೋ ಕೆಲಸಕ್ಕೆ ಹೋಗಬೇಕೆಂದು ನಿರ್ಧರಿಸುತ್ತಾರೆ. ಹೊರಡುವ ಸಮಯ ಗೊತ್ತಾಗಿದ್ದು ಎಲ್ಲರೂ ಹೊರಟು ನಿಂತಿದ್ದಾರೆ. ಇನ್ನೊಬ್ಬನಿಂದ ಪ್ರಯಾಣಕ್ಕೆ ತಡೆಯಾಗಿದೆ. ಕೂಡಿದವರಲ್ಲೊಬ್ಬ ಬರದೇ ಇರುವವನನ್ನು ಕರೆಯಲು ಹೋಗುತ್ತಾನೆ. ಪಾಪ, ಬರಲಾಗದವ ಅಡೆತಡೆಗಳಿಂದಾಗಿ ಹಿಂದಿನಿಂದ ಬರುವದಾಗಿ ತಿಳಿಸುತ್ತಾನೆ. ಈ ಸುದ್ದಿಯನ್ನು ಕೂಡಿದ್ದವರಲ್ಲಿಗೆ ಬಂದು ತಿಳಿಸುವ ರೀತಿಯು ಕುತೂಹಲವನ್ನುಂಟು ಮಾಡುತ್ತದೆ. ತಿರುಗಿ ಒಬ್ಬನೇ ಬಂದದ್ದನ್ನು ಕೂಡಿದವರು 'ಏನಂದಾ? ಬರಲಿಲ್ಲ್ಯಾಕ?' ಎಂದು ಕೇಳುತ್ತಾರೆ. ಕರೆದು ಬಂದವ ತಿರಸ್ಕಾರದಿಂದ —

ಸನಾದಿ ಸಂಬಾಳದ ಕೂಡ ಬಾ ಅಂದ್ರ
ಹಜಾಮರ ಕೂಡ ಬರತೀನಂತಿದ್ರಂತ|

ಎಂದು ಪರ್‍ಯಾಯವಾಗಿ ಹೇಳುತ್ತಾನೆ. ಇದರಲ್ಲಿ ತಿರಸ್ಕಾರವಿದ್ದರೂ ಕೇಳಿದವರೆಲ್ಲರೂ ಆತನ ಬಗೆಗೆ ಬಂದ ಗಾದೆ ಮಾತು ನಗುವಂತೆ ಪ್ರೇರೇಪಿಸುತ್ತವೆ.

ಊರಿದ್ದಲ್ಲಿ ಉಢಾಳರಿರುವಂತೆ ಉದ್ದುದ್ದ ಉಗುಳು ಸಿಡಿಸಿ ಮಾತಾಡುವವರೂ ಇರುತ್ತಾರೆ. ತನ್ನ ಕೈಲಿ ಕೆಲಸವಾಗದೆಯೋ, ಕೆಲಸ ಮಾಡಿದವರನ್ನು ಒಪ್ಪಿಕೊಳ್ಳದೆಯೋ ಸದಾ ಟೀಕಿಸುವವರನ್ನು ಕಂಡಾಗ ಒಮ್ಮೆಲೇ ಅವನ ಬಗೆಗೆ 'ಕೈಲಾಗದ ಮೂಳಾ ಮೈಯೆಲ್ಲಾ ಹರಕೋಂತಂತ' ಎನ್ನುತ್ತೇವೆ. ಬಹಳ ಬಡಿವಾರದ ಮಾತನಾಡಿ ಕಡಿಮೆ ಕೆಲಸಮಾಡು

ವರನ್ನು ಕಂಡಾಗ 'ಬಾಳಗಿಡ ಕಡಿಯಾಕ ಗೂಳಿಹಾಂಗ ಹಾರಾಡಿದ್ನಂತ' ಎನ್ನುತ್ತೇವೆ. ಮೈ ಪಂಚಿಕೊಳ್ಳುವ, ಬಾಳೆ ಗಿಡಕ್ಕೆ ಗೂಳಿಶಕ್ತಿಯನ್ನು ತೋರಿಸುವ ಭಂಡರನ್ನು ಕಂಡಾಗ ಅಲ್ಲಿ ತಿರಸ್ಕಾರವಿದ್ದರೂ ಮತ್ತೊಬ್ಬರನ್ನು ಆಡಿಕೊಳ್ಳುವಾಗ ಅವು ಹಾಸ್ಯಮಯ ಗಾದೆಗಳೆನಿಸಿ ನಗೆ ತರಿಸುತ್ತವೆ.

ಹಳ್ಳಿಯಲ್ಲಿ ಹೆಣ್ಣುಮಕ್ಕಳು ಪರಸ್ಪರ ಕೂಡಿದಾಗ ಮಾತುಗಳಿಗೆ ಕೊನೆಯೇ ಇರುವದಿಲ್ಲ. ಮಾತುಗಳಲ್ಲಿ ಗಂಡಂದಿರ ಬಗೆಗೂ ಚರ್ಚೆ ನಡೆದಿದೆ. ಒಬ್ಬಾಕೆಯ ಗಂಡ ತೀರಾ ಸೋಮಾರಿ. ಆತನಿಗೆ ಮನೆತನ ನಡೆಸುವ ತಾಕತ್ತಿಲ್ಲ ದಾಗಿದೆ. ಆಕೆ ತನ್ನ ಗಂಡನ ಬಗೆಗೆ ಬಹಳಷ್ಟು ಜಿಗುಪ್ಸೆ ಗೊಂಡು ಗಾದೆ ಮಾತಿನಲ್ಲಿ ಗಂಡನ ಸ್ವಭಾವ ಹೇಳುತ್ತಾಳೆ :

ಬಿಡಯವ್ವಾ,

ಕಡಿಲಾರದ ಕತ್ತಿ ಕೈಯಾಗಿದ್ರೇನಂತ..
ಮಾಡಲಾರದ ಗಂಡ್ನು ಮಗ್ಗಲಾಗಿದ್ರೇನಂತ!

ಈ ಗಾದೆ ಕೇಳಿ ಇನ್ನೊಬ್ಬಾಕೆಗೆ ನಗು ಬಾರದಿರುತ್ತದೆಯೇ? ಅವಳೊಬ್ಬಳಿಗೆ ಏಕೆ? ನಗೆಯನ್ನು ಹತ್ತಿಕ್ಕಬೇಕೆಂದರೆ ಯಾರಿಗೂ ಸಾಧ್ಯವಿಲ್ಲ. ನಗೆ ಸುಳಿದು ಹೋಗುತ್ತದೆ.

ಗಂಡ ದುಡಿದು ಬಂದಿದ್ದಾನೆ. ಹೆಂಡತಿ ಅಡಿಗೆ ನಡೆ ಸಿದ್ದಾಳೆ. ಆತನಿಗೆ ಸಾಕಷ್ಟು ಹಸಿವೆಯಾಗಿ ಹೆಂಡತಿಯನ್ನು ಆತುರಪಡಿಸುತ್ತಾನೆ. ಗಂಡನ ಆತುರತೆಗೆ ಬಲಿಯಾಗಿ

ಹೆಂಡತಿ ಬಿಸಿಬಿಸಿಯಾದುದನ್ನ ತಾಟಿಗೆ ಹಾಕುತ್ತಾಳೆ. ಆತ ತುತ್ತನ್ನು ಒಮ್ಮೆಲೇ ಬಾಯಿಗೆ ಹಾಕಿಕೊಳ್ಳುತ್ತಾನೆ. ಬಾಯಿ ಸುಡುತ್ತದೆ. ಆತನ ಸಂಕಟ ಕಂಡು ಹೆಂಡತಿಗೆ ನಗು ಬರುತ್ತದೆ. ಅದರ ಜೊತೆಗೆ ಗಾದೆಯೂ ಬರುತ್ತದೆ.

ಆಗುವ ತನಕಾ ನಿಂತು
ಆರುವ ತನಕಾ ನಿಂದರ್ಲಿಲ್ಲಂತ.

ಹೆಂಡತಿಯ ನಗುಮುಖವನ್ನು ಕಂಡು ಆತನೂ ಗಾದೆ ಕೇಳಿ ಸುಡುವ ತುತ್ತನ್ನು ನುರಿಸುತ್ತಲೇ ನಗುತ್ತಾನೆ. ಸಂದರ್ಭಕ್ಕೆ ತಕ್ಕಂತೆ ಆತುರದ ಸ್ವಭಾವವನ್ನು ಗಾದೆ ಮೂಲಕ ಬಹಳ ಸುಂದರವಾಗಿ ಚಿತ್ರಿಸಲಾಗಿದೆ. ಹೀಗೆ ಸರಸ ಬಾಳಿಗೂ ಗಾದೆ ಬಳಕೆಯಾಗಿದೆ.

ಅಂಗಡಿಯಲ್ಲಿ ಸಾಕಷ್ಟು ಗಿರಾಕಿಗಳಿವೆ. ಕಾರಕೂನ ಬರೆಯುವದನ್ನು ಬಿಟ್ಟು ಲೆಕ್ಕಣಿಕೆಯನ್ನು ತನ್ನ ಕಿವಿಯ ಸಂದಿನಲ್ಲಿ ಸಿಕ್ಕಿಸುತ್ತಾನೆ. ಬಂದ ಗಿರಾಕಿಗಳನ್ನು ವಿಚಾರಿಸಿಕೊಳ್ಳುತ್ತಾನೆ. ಒಂದೊಂದೇ ವಿಚಾರ ಮುತ್ತಿ ಆತನಿಗೆ ಮರೆವು ಆವರಿಸುತ್ತದೆ. ಮತ್ತೆ ಬರೆದುಕೊಳ್ಳಲು ಕುಳಿತಲ್ಲೆಲ್ಲಾ ಹುಡುಕಾಡುತ್ತಾನೆ. ಆತನ ಹುಡುಕಾಟ ಗಿರಾಕಿಯೊಬ್ಬನಿಗೆ ತಿಳಿದು ಆತ ಕಾರಕೂನನ ಕಿವಿ ಗಮನಿಸಿ ಲೆಕ್ಕಣಿಕೆ ತೋರಿಸುತ್ತಾನೆ. ಕಾರಕೂನ ತನ್ನ ಅವಸ್ಥೆಗೆ ತಾನೇ ಶಪಿಸುತ್ತ ಬರೆಯ ಹತ್ತುತ್ತಾನೆ. ಗಿರಾಕಿ ಮೆತ್ತಗೆ ಗಾದೆಯೊಂದನ್ನು ಎಸೆಯುತ್ತಾನೆ.

ಹೊರಕಡಿಗೆ ಹೋದಲ್ಲಿ
ಚರಗಿ ಮರತ ಬರಾಂವ.

ಈ ಗಾದೆ ಕೇಳಿ ಮಗ್ಗುಲ್ಲಿದ್ದವರಿಗೂ ನಗುಬರುವದು. ಇಲ್ಲಿ ಅಸಹ್ಯ ಅರ್ಥವಿದ್ದರೂ ಅದು ವಾಸ್ತವ ಚಿತ್ರ ಬಿಂಬಿಸುತ್ತದೆ. ಗಾದೆಗಳು ವೇದಕ್ಕೆ ಸಮಾನವಾದರೂ ಹಾಸ್ಯಕ್ಕೆ ಸ್ವಲ್ಪ ಹಾಸಿಗೆ ಬಿಟ್ಟಿದ್ದಾರೆ. ಆ ಹಾಸ್ಯದಲ್ಲಿಯೂ ರೀತಿ-ನೀತಿಗಳು ಇದ್ದೇ ಇರುತ್ತವೆ. ಸಂದರ್ಭಕ್ಕೆ ತಕ್ಕ, ಸಮಯೋಚಿತವಾದ ಗಾದೆಗಳನ್ನು ಸೃಷ್ಟಿಸಿದ ನಮ್ಮ ಜಾನಪದ ಜಾಣ್ಮೆಯನ್ನು ಎಷ್ಟು ಕೊಂಡಾಡಿದರೂ ಕಡಿಮೆಯೆನಿಸುತ್ತದೆ.

೫. ಒಗಟುಗಳಲ್ಲಿ ಹಾಸ್ಯ

ಒಗಟು-ಒಡಪು ಈ ಎರಡೂ ಪ್ರಕಾರಗಳನ್ನು ಕೆಲವರು ಒಂದೇ ಎಂದು ಬಗೆದಿದ್ದಾರೆ. ಆದರೆ ಅವೆರಡು ಪ್ರತ್ಯೇಕ ಪ್ರಕಾರಗಳು. ಅಂತರಂಗದಲ್ಲಿ ನಿಜವಾದ ಅರ್ಥ; ಬಹಿರಂಗದಲ್ಲಿ ಲೌಕಿಕಾರ್ಥವನ್ನು ಒಳಗೊಂಡಿದ್ದೇ ಒಗಟು. ಗಂಡನು ಹೆಂಡತಿಯ, ಹೆಂಡತಿಯು ಗಂಡನ ಹೆಸರು ಹೇಳುವಾಗ ಒಲವು-ವರ್ಣನೆ ಬೆರತ ಮಾತುಗಳಿಂದ ಹೇಳುವದೇ ಒಡಪು.

ಒಡೆದು ಹೇಳಲು ಒಗಟು ರಚಿತವಾಗಿರುತ್ತವೆ. ಇದರಲ್ಲಿ ಬುದ್ಧಿಯ ಕಸರತ್ತು ತುಂಬಿರುತ್ತದೆ. ಕಾವ್ಯಮಯವಾಗಿ, ಪ್ರಾಸಬದ್ಧವಾಗಿ ಒಗಟನ್ನು ಎಸೆದು ಅದರ ಅರ್ಥ ಬಿಡಿಸಿ ಹೇಳಲು ಕೇಳಿದಾಗ ಆಲೋಚನೆ ಇನ್ನೂ ಲೊಚಗುಟ್ಟುತ್ತಲೇ ಇರುತ್ತದೆ. ತೋರಿಕೆಯ ಅರ್ಥವೇ

ಮೋಜೆನಿಸುವಾಗ ಅದರ ಒಳಗಿನ ಅರ್ಥ ಇನ್ನೆಷ್ಟು ಮೋಜೆನಿಸದು ?

ಜಾನಪದರು ಬರೀ ಹಾಡುಗಾರರಲ್ಲ. ಕುಣಿದಾಡುವವರಲ್ಲ. ಭಾವುಕರಷ್ಟೇ ಅಲ್ಲ. ಜಾಣ್ಮೆಯುಳ್ಳವರು. ಈ ಮಾತನ್ನು ಒಗಟುಗಳು ಸಾದರಪಡಿಸುತ್ತವೆ. ಹೆಚ್ಚಾಗಿ ಲೈಂಗಿಕ ಕ್ರಿಯೆ—ಅಂಗಾಂಗಗಳನ್ನು ಹೊರಮೈಯನ್ನಾಗಿ ಬಳಸಿ ಹೇಳುವದು ಒಗಟಿನ ಒಂದು ಲಕ್ಷಣವಾದರೂ ಹೊರಮೈ ಕವಚ ಕಳಚಿ ಒಳಗಿನ ಅರ್ಥ ಸವಿದಾಗ ಅಲ್ಲಿ ಅಶ್ಲೀಲಕ್ಕೆ ಸ್ಥಾನವೇ ಇಲ್ಲ. ಬದುಕಿನ ಯಾವುದಾದರೊಂದು ಕ್ರಿಯೆ ಅಲ್ಲಿ ರೂಪಗೊಂಡಿರುತ್ತದೆ. ಒಗಟುಗಳು ಮೋಜು, ಹಾಸ್ಯ, ಚಮತ್ಕಾರಿಕೆಗಳಿಗಾಗಿ ಬಳಕೆಯಾಗುತ್ತವೆಂದರೆ ತಪ್ಪಾಗಲಾರದು.

ಒಗಟುಗಳನ್ನು ಶರಣರು ವಚನಗಳಲ್ಲಿ ಹೇಳಿದ್ದಾರೆ. ಸರ್ವಜ್ಞನೂ ಸಹ ಹೇಳಿದ್ದಾನೆ. ಇವುಗಳಿಗೆ 'ಬೆಡಗಿನ ವಚನ'ಗಳೆಂದು ಕರೆಯುತ್ತಾರೆ. ಸರ್ವಜ್ಞನನ್ನು ಶ್ರೀ ಬಿ. ಎಂ. ಹೊರಕೇರಿಯವರು 'ಬೆಡಗಿನ ಬಂಟ'ನೆಂದು ಬಣ್ಣಿಸಿ ಆತನ ಬೆಡಗಿನ ವಚನಗಳ ಬಗೆಗೆ ಹೀಗೆ ಹೇಳಿದ್ದಾರೆ— "ಸರ್ವಜ್ಞನು ಮೂಲತಃ ಜನಸಾಮಾನ್ಯಕ್ಕಾಗಿ, ಗ್ರಾಮೀಣ ಜನತೆಗಾಗಿ ವಚನಗಳನ್ನು ರಚಿಸಿದಾಗ್ಯೂ ಅವನು ಬೆಡಗಿನ ವಚನಗಳನ್ನು ರಚಿಸಿದುದು ನೋಡಿದರೆ ತನ್ನ ಸಾಹಿತ್ಯಕ್ಕೆ ಮೂಗು ಮುರಿಯುವ ಪಂಡಿತರಿಗೂ ಸವಾಲು ಹಾಕಿದ್ದಾನೆ. ಬೆಡಗಿನ ವಚನಗಳ ಒಡಗತೆಗಳ ಉತ್ತರಕ್ಕಾಗಿ ಅವರನ್ನು

ಆಹ್ವಾನಿಸಿದ್ದಾನೆ."[1] ಯಾಕೆಂದರೆ ಸರ್ವಜ್ಞನು ಎಷ್ಟಾದರೂ ಜಾನಪದ ಕವಿಯಲ್ಲವೇ?

ಒಗಟುಗಳು ಹಾಸ್ಯದ ಚಿಲುಮೆಯೆನಿಸಿವೆ. ಬುದ್ಧಿವಂತ್ರಿಕೆಯಿದ್ದರೂ ಉತ್ತರ ಕೇಳಿದಾಗ ಆಗುವ ಅವ್ಯಕ್ತ ಆನಂದ ಮುಗುಳು ನಗೆಯ ಮೂಲಕ ವ್ಯಕ್ತವಾಗುತ್ತದೆ. ಖೊಖ್‌ಖೊಖ್ ಎಂದು ನಗುವಂತೆಯೂ ಇಲ್ಲ. ನಿರ್ಲಿಪ್ತರಾಗಿ ಬಿಡುವಂತೆಯೂ ಇಲ್ಲ. ಕಾರಣ ಒಗಟು ಹಾಗೂ ಅವುಗಳ ಉತ್ತರ ಬಲು ಮೋಜಿನ ಅನುಭವ ಕೊಡುತ್ತವೆ.

ಬಾಲಕರಂತೂ ತಮ್ಮ ವಯೋಮಾನಕ್ಕೆ ಮೀರಿ ಒಗಟು ಹೇಳುವದನ್ನು ಕಂಡರೆ ಆಶ್ಚರ್ಯವಾಗದಿರದು. ಮುಗ್ಧ ಮನಸ್ಸಿನಲ್ಲಿ ಅಶ್ಲೀಲ ಕಲ್ಪನೆಯಿರದಿದ್ದರೂ ಪ್ರಾಯದವರಿಗೆ ಅದು ಅಶ್ಲೀಲವಾಗಿ ಕಾಣಬಹುದು. ಅದರ ಒಳಗಿನ ಅರ್ಥ ಹೊರಬಂದಾಗ ಬಾಲಕರ 'ಒಡಗತೆ'ಗಳಿಗೆ ಮೆಚ್ಚಿಗೆ ಸೂಚಿಸದೇ ಇರದು. ತಂದೆ-ತಾಯಿಗಳೊಂದಿಗೆ ಮಕ್ಕಳು ಕುಳಿತಿದ್ದಾರೆ. ಒಗಟುಗಳನ್ನು ಮಕ್ಕಳಿಗೆ ಹೇಳುತ್ತಿದ್ದಾರೆ. ಅವರ ಪ್ರಭಾವದಿಂದಾಗಿ ಕಿಲಾಡಿ ಮಗು ತಂದೆ ತಾಯಿ ಮುಖನೋಡಿ ಒಗಟೊಂದನ್ನು ರೂಪಿಸುತ್ತದೆ. ಅದನ್ನು ಹೇಳಿಯೂ ಬಿಡುತ್ತದೆ ಆ ಮಗು.

ಅವ್ವಗ ಒಂದ ಐತಿ
ಅಪ್ಪಗ ಮೂರು ಅದಾವು!

---

೧ ಸಂಯೋಜಕ ಸರ್ವಜ್ಞ—ಬಿ. ಎಂ. ಹೊರಕೇರಿ, ಪುಟ-೯೫.

ಮಗುವಿನ ಒಗಟು ಕೇಳಿ ದಂಪತಿಗಳಿಬ್ಬರೂ ನಾಲಿಗೆ ಕಚ್ಚಿಕೊಂಡು ಮುಗುಳ್ನಗುತ್ತ ಮುಖಮುಖ ನೋಡಿಕೊಳ್ಳುತ್ತಾರೆ. ಮಗು ಉತ್ತರಕ್ಕಾಗಿ ಪೀಡಿಸುತ್ತದೆ. ಸಂಕೋಚ ಅವರನ್ನು ಮುತ್ತುವದು. ಅವರಿಗೆ ಬೇರೊಂದು ಅರ್ಥ ತಿಳಿದಿದೆ ಹೊರತಾಗಿ ಆ ಒಗಟಿನ ಒಳಗಿನ ಅರ್ಥ ತಿಳಿದಿಲ್ಲ. ಅವ್ವನ ಹಣೆಯ ಮೇಲೆ ಕುಂಕುಮ ಬೊಟ್ಟು ಒಂದೇ ಇದೆ. ಅಪ್ಪನ ಹಣೆಯಮೇಲೆ ವಿಭೂತಿಯ ಬೆರಳು ಮೂರು ಇವೆ. ಇದನ್ನು ಗಮನಿಸಿ ಅವ್ವನಿಗೆ ಒಂದು, ಅಪ್ಪನಿಗೆ ಮೂರು ಇವೆ ಎಂದು ಮಗು ಹೇಳಿದ ಒಗಟಿಗೆ ಲೌಕಿಕಾರ್ಥ ಹಚ್ಚಿದರೆ ನಗು ಬಾರದಿರುತ್ತದೆಯೋ ?

'ಆಟೆ ಮಗನೆ, ಜೋಟೆ ಮಗನೆ, ಗಳೇಕ ಹೋಗೋ ಲೌಡಿ ಮಗನೆ' ಇದು ಬೈಗುಳಲ್ಲ. ಒಂದು ಒಗಟು. ಪರಿಸರವನ್ನು ಗಮನಿಸಿ ರಚಿತವಾದ ಈ ಒಗಟಿನ ಉತ್ತರ-ಬಾರಕೋಲು. 'ತೆಗ್ಗಿನ್ಯಾಗ ಬಸರಾಗತಾಳಾ, ತೆವರಾಗ ಹಡೀತಾಳ' (ಉತ್ತರ-ತತ್ತಿ). 'ಬಾಯಿಲೆ ತಿಂತೈತಿ, ಬಗಲಾಗ ಕಾರತೈತಿ' (ಉ-ಬೀಸುವ ಕಲ್ಲು). ಪ್ರಾಸಬದ್ಧವಾಗಿ ರಚಿತವಾದ ಇಂಥ ಒಗಟುಗಳು ಸುಂದರ ಕಾವ್ಯ ಲಕ್ಷಣಗಳನ್ನು ಒಳಗೊಂಡಿವೆ.

ಅರ್ಧಾ ಹೊಕ್ಕಾಗ ಅಳತಾಳಾ
ಪೂರಾ ಹೊಕ್ಕಾಗ ನಗತಾಳಾ

ಈ ಒಗಟಿನಲ್ಲಿ ಸಂಪೂರ್ಣ ಲೈಂಗಿಕ ಕ್ರಿಯೆಯಿದೆ ಯೆಂದು ಅದಕ್ಕಾಗಿ ನಗಬಹುದು. ಆದರೆ ಬಳೆಗಾರ

ಹೆಣ್ಣಿನ ಕೈಗೆ ಬಳೆ ತೊಡಿಸುವಾಗ ನೋವಾಗಿ ಅಳುವದು, ಬಳೆಯು ಮುಂಗೈ ದಾಟಿದಾಗ ಹರುಷದಿಂದ ನಗುವದು- ಎಂದು ಅದರ ಅರ್ಥ ಗೊತ್ತಾದಾಗ, ಸಂಕೋಚವು ಹಿಂದೆ ಸರಿದು ಸುಳಿನಗೆ ಮುಂದೆ ಸುಳಿದಾಡುತ್ತದೆ. ಇದೇ ರೀತಿ ಯಲ್ಲಿ 'ಅಮ್ಮನ ಗಡಿಗ್ಯಾಗ ಅಜ್ಜ ಕಡ್ಡ್ಯಾಡಿಸತಾನ' ಎಂದರೆ ಮುದುಕ-ಮುದುಕಿಯರ ಸರಸ-ಸಲ್ಲಾಪವಲ್ಲ. ಬೆಣ್ಣೆ ಕಡೆಯುವಾಗ ಕಡಗೋಲನ್ನು ಗಡಿಗೆಯಲ್ಲಿಟ್ಟು ಮೊಸರು ಕಡಿಯುವದು.

ಹಂತಿ ಹಾಡುಗಳನ್ನು ಹಾಡುವಾಗ ಎರಡು ಮೇಳ ಕೂಡಿದರೆ ಮುಗಿಯಿತು. ಸವಾಲಿಗೆ ಸವಾಲು ಹಾಕಿ ಉತ್ತರ ಕೇಳುತ್ತಾರೆ. ಉತ್ತರಿಸಬೇಕು; ಇಲ್ಲವೆ ತತ್ತರಿಸಿ ಕೈ ಮುಗಿಯಬೇಕು. ಒಗಟಿನ ಹಾಡು ಬಂದಾಗಲಂತೂ 'ವಾದಾ ಮಾಡಾವ್ನ ಒಡದ್ಹೇಳು' ಎಂಬ ಜುಟುಕಿನ ಜುರುಕು ಮುಟ್ಟುತ್ತದೆ. ಇಲ್ಲಂತೂ ಲೈಂಗಿಕ ಕ್ರಿಯೆ- ಅಂಗಗಳನ್ನು ಬಳಸಿ ಹಾಡುತ್ತಾರೆ.

ಪ್ರಶ್ನೆ— ಸಣ್ಣವಗ ಸಣಕುಂಡಿ ದೊಡ್ಡವಗ ದೊಡಕುಂಡಿ
ಒಬ್ಬವಗ ಕುಂಡಿ ಮೊದಲಿಲ್ಲೊ | ನನ ಜಾಣಾ
ವಾದಾ ಮಾಡಾವ್ನೆ ಒಡದ್ಹೇಳು.

ಉತ್ತರ—ಸೂಜಿಗಿ ಸಣಕುಂಡಿ ಡಬ್ಬಣಕ ದೊಡಕುಂಡಿ
ಕದರಿಗಿ ಕುಂಡಿ ಮೊದಲಿಲ್ಲ | ನನ ಜಾಣಾ
ವಾದಾ ಮಾಡಾವ್ನ ತಿಳಕೋರೊ.

ಹೀಗೆ ಪ್ರಶ್ನೋತ್ತರ ರೂಪದಲ್ಲಿ ಒಗಟ ಕಟ್ಟಿ ಒಬ್ಬರು ಹಾಡಿದರೆ ಅದಕ್ಕೆ ಉತ್ತರವನ್ನು ಹಾಡಿನಲ್ಲಿಯೇ ಇನ್ನೊಬ್ಬರು ಹೇಳುತ್ತಾರೆ. ಕ್ಷಣಕ್ಷಣಕ್ಕೆ ಹಾಡು ಕುತೂಹಲವನ್ನುಂಟುಮಾಡುತ್ತದೆ.

ಬಡಿಗ್ಯಾಗ ಮೆರೆಯುವಳು ಗಡಿಗ್ಯಾಗ ಕೂಡುವಳು
ಬಡವರಾದರೂ ಬಲು ಚಲುವಿ! ಹುಡಿಗಿಗೆ
ಮನಸೋತರಪ್ಪ ಹುಡುಗರು

ಹುಡುಗಿಗೆ ಮನಸೋಲಬಹುದು ನಿಜ. ಆದರೆ ಬಡಿಗೆ_ಗಡಿಗೆ_ಬಡತನಗಳು ಎಂದರೇನು? ಆದರೂ ಚೆಲುವೆಯಂತೆ ಬಡವರಿಂದ ಹಿಡಿದು ಸಿರಿವಂತರೂ ಅಂಥ ಚೆಲುವೆಯ ಸವಿಯುಣ್ಣಲು ಮನಸೋಲಬೇಕಾದರೆ ಅವಳೆಂಥ ಹೆಣ್ಣು? ಅವಳು ಹೆಣ್ಣಲ್ಲ ಹಣ್ಣು! ಹುಣಸೆಹಣ್ಣು!! ಆ ಹುಣಸೆ ಹಣ್ಣು ಕಂಡಾಗ ಸಹಜವಾಗಿ ಬಾಯಿಯಲ್ಲಿ ನೀರೂತ್ತದೆ.

ಹೆಚ್ಚಾಗಿ ಲೈಂಗಿಕತೆಯ ಲೇಪನಬಳಿದುಕೊಂಡಿರುವ ಇಂಥ ಒಗಟುಗಳ ಬಗೆಗೆ ಶ್ರೀ ಕ್ಯಾತನಹಳ್ಳಿ ರಾಮಣ್ಣನವರು ಹೀಗೆ ಹೇಳಿದ್ದಾರೆ. "ಸಾಂಪ್ರದಾಯಿಕ ನೆಲೆಗಟ್ಟಿನಲ್ಲೇ ಬೆಳೆದು ಬಂದಿರುವ ನಮ್ಮ ಜನಪದ ಬದುಕಿನಲ್ಲಿ ಸಾಮಾನ್ಯವಾಗಿ ಲೈಂಗಿಕತೆಯ ಬಗ್ಗೆ ಅತಿಕಡಿಮೆ ಜ್ಞಾನವಿರುತ್ತದೆ; ಇನ್ನೂ ಸ್ಪಷ್ಟವಾಗಿ ಹೇಳಬಹುದಾದರೆ ಈ ಬಗ್ಗೆ ಸಂಕುಚಿತ ಮನೋಭಾವವಿರುತ್ತದೆ. 'ಸಂಕುಚಿತ ಮನೋಭಾವ' ಎಂಬ ಈ ಮಾತಿನಲ್ಲಿ ಎದ್ದು ಕಾಣುವಂತೆ ಕೆಟ್ಟ ವಾಸನೆ

ಯೇನೂ ಇಲ್ಲಿರುವದಿಲ್ಲ. ಈ ಬಗೆಯ ಮನೋಭಾವ ಚಾರಿತ್ರ್ಯ ಶುದ್ಧಿಯುಳ್ಳ ಬದುಕಿಗೆ ಬಹುಮಟ್ಟಿಗೆ ಸಹಾಯಕವಾಗುವದರಿಂದ ಇದೊಂದು ಸಹ್ಯ ಮನೋಭಾವ. ಈ ಮನೋಭಾವವನ್ನು ಇನ್ನೂ ಹೆಚ್ಚು ಸಮಂಜಸವಾಗಿ ಹೇಳಬಹುದಾದರೆ ಇದು ಸಂಕುಚಿತ ಪ್ರವೃತ್ತಿಯ ಮನೋಭಾವ".[೧]

ಆ ಸಂಕೋಚ ಪ್ರವೃತ್ತಿಯನ್ನು ಕೆಣಕಿ ಒಗಟು ಕಟ್ಟಿ ಕೇಳಿದಾಗಲೆ ಮನಸ್ಸಿಗೆ ಒಂದು ರಂಜನೆ, ಬುದ್ಧಿಗೆ ಆಹಾರ, ಬದುಕಿಗೆ ವಿಹಾರ.

೬ ಒಡಪುಗಳಲ್ಲಿ ಹಾಸ್ಯ

ಒಡಪು ಎಂದರೆ ತಮ್ಮ ಗಂಡನ ಅಥವಾ ಹೆಂಡತಿಯ ಹೆಸರು ಹೇಳಲು ಆ ಹೆಸರಿಗೆ 'ಒಡವೆ' ಎಂದರೆ ಆಭರಣದ ರೂಪ ತೊಡಿಸಿ ಹೇಳುವದರಿಂದ ಅವುಗಳನ್ನು 'ಒಡಪು' ಎಂದು ಕರೆಯುತ್ತಾರೆ. ಹೆಣ್ಣುಮಕ್ಕಳಿಗೆ ಗಂಡನ ಹೆಸರು ಹೇಳು ಎಂದು ಕೇಳಿದಾಗ ಒಮ್ಮೆಲೇ ಕಲ್ಲಪ್ಪ ಮಲ್ಲಪ್ಪ ಯಲ್ಲಪ್ಪ ಹುಲ್ಲಪ್ಪ ಎಂದು ಯಾವ ಹೆಂಡತಿಯೂ ತಮ್ಮ ಗಂಡನ ಹೆಸರನ್ನು ಹೇಳಲು ಇಷ್ಟಪಡುವದಿಲ್ಲ. ಯಾರಾದರು ಹಾಗೆ ಹೇಳಿದರೆ ಅವಳು ಗಂಡನಿಗೆ ತಕ್ಕ ಹೆಂಡತಿಯಾಗಲಾರಳು. ದರಿದ್ರ ಮುಂಡೆಯಾದಾಳು. ಗಂಡನು ಬೇಕಾದರೆ ಹೆಂಡತಿಯ ಹೆಸರನ್ನು ಏಕವಚನದಲ್ಲಿ ಕರೆಯಬಹುದು.

---

೧ ಜಾನಪದ ವಿಹಾರ-ಕ್ಯಾತನಹಳ್ಳಿ ರಾಮಣ್ಣ ಪು. ೫೪

ಆದರೆ ಆದರಲ್ಲಿಯೇ ಒಂದು ಸೊಗಸಿವೆ ಹೊರತಾಗಿ, ಕೀಳು ಭಾವನೆಯಿರುವದಿಲ್ಲ.

ಗಂಡನ ಒಳ್ಳೆಯ ಗುಣವನ್ನೋ, ಸುಂದರತೆಯನ್ನೋ, ಕಾವ್ಯರೂಪದಲ್ಲಿ ಕಟ್ಟಿ ಹೇಳುತ್ತಾರೆ. ಆ ಹೆಸರು ಹೇಳುವಾಗ ಹೆಣ್ಣಿಗೆ ಸಹಜ ನಾಚಿಕೆ ಆವರಿಸುತ್ತಿದೆ. ತುದಿನಾಲಿಗೆಯಲ್ಲಿ ಆ ಹೆಸರು ತುಟಿಗಳನ್ನು ಕಂಪಿಸುತ್ತಿದ್ದರೂ ಬೇಗ ಹೊರ ಬರುವದಿಲ್ಲ. ಆ ಹೆಸರು ಹೇಳುವ ಬದಲು ಮೊದಲು ನಾಂದಿಯಾಗಿ ಬರುವ ದೀರ್ಘವಾದ ಕಾವ್ಯಗುಣವೇ ಒಡಪು.

ನವನಾಗರಿಕತೆಯ ಸೋಂಕಿನಿಂದಾಗಿ ಕೆಲ ಸುಶಿಕ್ಷಿತ ಜನಾಂಗ ಗಂಡ ಹೆಂಡಿರ ಹೆಸರನ್ನು ಹೇಳಲು ಹಿಂಜರಿಯು ವದಿಲ್ಲ. ಅಷ್ಟೇ ಅಲ್ಲ ನಿತ್ಯ ಆಯಾ ಹೆಸರು ಹಿಡಿದು ಕೂಗಿ ದರೇನೇ ತೃಪ್ತಿ. ಹೆಂಡತಿ ತವರಿಗೆ ಹೋದರೆ ಮುಗಿಯಿತು. ಸುಶಿಕ್ಷಿತ ಗಂಡನಿಗೆ ಹೆಂಡತಿಯ ಹೆಸರು ನಿತ್ಯ ಮಂತ್ರ ಪಠಣವಾಗುತ್ತದೆ.

ಆದರೆ ಜಾನಪದರ ದೃಷ್ಟಿಯೇ ಬೇರೆ. ನಮ್ಮ ಹಿರಿಯಾ, ಯಜಮಾನಾ, ಗೌಡ್ರು, ಧಣೇರು, ಸಾವ್ಕಾರು ಎಂದೆಲ್ಲಾ ಕರೆಯುತ್ತಾರೆ. ಗಂಡ ನೌಕರಿ ಮಾಡುತ್ತಿದ್ದರೆ 'ಸಾಹೇಬರು' ಎಂದು ಸೇರಿಸುತ್ತಾರೆ. ಗಂಡಂದಿರ ಹೆಸರು ಹಿಡಿದು ಹಳ್ಳಿ ಗಳಲ್ಲಿ ಯಾವ ಹೆಂಡಂದಿರೂ ಕರೆಯುವದಿಲ್ಲ. ಅದು ಅವರಿಗೆ ಉಚಿತವಲ್ಲ. ಪ್ರಸಂಗ ಒದಗಿ ಬಂದರೆ ಮಾತ್ರ, ಆ ಗಂಡನ ಹೆಸರನ್ನು ಹೇಳದೇ ಬಿಡುವದಿಲ್ಲ. ಅದನ್ನು ಹಾಗೆಯೇ

ಹೇಳಲಾರರು. ಅವರ ಹೆಸರಿಗೊಂದು ಒಡಪಿನ ಆಭರಣ ಬೇಕು. ಹೆಸರಿಗೆ ಒಡಪು ತೊಡಿಸಿ ಯಾವ ಗೌಡಕಿ, ವತನಕಿ, ಅಧಿಕಾರವಿರದಿದ್ದರೂ, ಅವೆಲ್ಲವೂ ಬಂದು ಸೇರುತ್ತವೆ. ಗೌರವ ಸೂಚಕ ಶಬ್ದಗಳನ್ನು ಸೇರಿಸಿ ಹೇಳದಾಗಲೇ ಒಂದು ರೀತಿಯ ಸಂತೃಪ್ತಿ.

ಒಡಪುಗಳಲ್ಲಿ ಸಾಕಷ್ಟು ಹಾಸ್ಯ ತುಂಬಿರುತ್ತದೆ. ಹೇಳಿದವರು ಕೇಳಿದವರು ಕೂಡಿಯೇ ನಗಬೇಕು. ಸೊಗಸು ಸ್ವಾರಸ್ಯಗಳೇ ಒಡಪಿನ ಲಕ್ಷಣಗಳಾದುದರಿಂದ ತೀರಾ ಗಂಭೀರ ವಾಗಿ ಹೆಸರು ಹೇಳಿದರೆ ಅದರಲ್ಲಿ ಸ್ವಾರಸ್ಯವಿರುವದಿಲ್ಲ. ಕೇಳಿದಾಗ ಯಾರೂ ಹೇಳದಿರಬಾರದು. ಹೇಳದಿದ್ದರೂ ಸಹಿತ ಪೀಡಿಸಿಯಾದರೂ ಹೇಳಿಸಿಬಿಡುತ್ತಾರೆ.

ಮನೆಯಲ್ಲಿ ಮಂಗಲಮಯ ಪ್ರಸಂಗ ನಡೆದಿದೆ. ಗಂಡ ಹೆಂಡತಿ ಕೂಡಿಯೇ ಆರತಿ ಬೆಳಗಬೇಕಾಗಿದೆ. ಅಡ್ಡಣಿಗೆಯ ಮೇಲೆ ಆರತಿಯಿರುತ್ತದೆ. ಹೆಂಡತಿ ಆರತಿಯನ್ನು ಕೈಗೆತ್ತಿಕೊಳ್ಳುತ್ತಲೇ ಅವಳ ಬಾಯಿಂದ ಗಂಡನ ಹೆಸರು ಹೇಳಿಸಲು ಉಳಿದವರು ಅಡ್ಡಜೆಗೆ ತೆಗೆದು ಬಿಡುತ್ತಾರೆ. ಹೆಸರು ಹೇಳುವ ಪ್ರಸಂಗ ಬಂತೆಂದು ಆರತಿ ಬೆಳಗುತ್ತಲೇ ಆಕೆ ಮನದಲ್ಲಿ ಒಡಪುಗಳನ್ನು ನೆನಪಿಸುತ್ತಾಳೆ. ಔಪಚಾರಿಕವಾಗಿ ಗಂಡನ ಹೆಸರು ಹೇಳಲು ಕೇಳುತ್ತಾರೆ. ಆರತಿ ಹಿಡಿದ ಹೆಣ್ಣಿನ ಮುಗುಳ್ನಗೆಯ ಮುಖದಿಂದ ನಾಚುತ್ತಲೇ ಹೆಸರಿಗೆ ಮೊದಲು ಒಡಪು ಬರುತ್ತದೆ.

ಪಡಿರೊಟ್ಟಿ ಹಿಡಿಹಿಂಡಿ
ಜಡತಾ ಜಡದು
ಪಡಸಾಲ್ಯಾಗ ಸಿಡದು ಮಕ್ಕೊಳ್ಯತಾರ...ಗೌಡ್ರು!

ಗಂಡನೂ ಅಲ್ಲೇ ಇದ್ದಾನೆ. ಆತನ ಸೋಮಾರಿತನ ಎಲ್ಲರಿಗೂ ಗೊತ್ತಿದೆ. ಅದನ್ನೇ ನವಿರಾದ ಹಾಸ್ಯದಲ್ಲಿ ಹೇಳಿದ್ದಾಳೆ. ಕೇಳಲು ಒರಟಾದರೂ ಅಲ್ಲಿದ್ದವರಿಗೆಲ್ಲಾ ನಗು ಬರುತ್ತದೆ. ಅಡ್ಡಣಿಗೆಯನ್ನು ಕೆಳಗಿಡುತ್ತಾರೆ. ಆರತಿಯನ್ನು ಅದರ ಮೇಲಿಟ್ಟು ಹೆಂಡತಿ ಹಿಂದೆ ಸರಿಯುವಳು. ಗಂಡನು ಆರತಿ ಬೆಳಗುವ ಪಾಳಿ ಬರುತ್ತದೆ. ಅವನಿಗೂ ಹೆಂಡತಿಯ ಹೆಸರು ಹೇಳುವ ಪ್ರಸಂಗ ಒದಗುತ್ತದೆ. ತನ್ನ ಹೆಸರನ್ನು ಗಂಡನ ಬಾಯಿಂದ ಕೇಳಲು ಹೆಂಡತಿ ಕುತೂಹಲದಿಂದ ಉಳಿದವರೊಂದಿಗಿದ್ದಾಳೆ. ಹೆಂಡತಿ ತನ್ನನ್ನು ಹಾಸ್ಯಮಾಡಿ ಹೇಳಿದಂತೇ ಪ್ರತಿಯಾಗಿ ಆತನು ಅಂಥದೇ ಒಡಪು ಹುಡುಕಿ ಹೇಳುತ್ತಾನೆ.

ಒಂಟಿ ಎಲುಬ
ಗಂಟ ಮೂಗ
ಕಂಠಮಟ ತಿಂದು
ಪಂಟ ಬಡಿಯಾಕ
ಎಂಟಮುನಿ ತಿರಗತಾಳ...!

ಎಂದು ಏಕವಚನದಲ್ಲಿ ಹೆಂಡತಿ ಹೆಸರು ಹೇಳುತ್ತಾನೆ. ಪ್ರಾಸಬದ್ಧವಾಗಿ ಗಂಡ ಹೆಂಡಿರ ಈ ಒಡಪುಗಳನ್ನು ಕೇಳಿ

ದಾಗ ಯಾರಿಗೆ ನಗು ಬರಲಿಕ್ಕಿಲ್ಲ. ನಕ್ಕು ನಲಿಯುವದಕ್ಕಾಗಿಯೇ ಈ ಬಗೆಯ ಒಡಪುಗಳು ಹುಟ್ಟಿಕೊಂಡಿವೆ. 'ಗಣಕಿಲೆ ಬಡದರ ಕುಣಕೊಂತ ಬರತಾಳ; ವನಕಿಲೆ ಬಡದರ ಮಣಕಾಲ್ಲೆ ಬರತಾಳ' ಎಂದು ಗಂಡಸರು ಹೇಳುವ ಒಡಪುಗಳಲ್ಲಿ ಹೆಂಡತಿಯನ್ನು ಕೀಳಾಗಿ ಕಾಣುತ್ತಾರೆಂದು ತಿಳಿಯುವಂತಿಲ್ಲ. ಅವು ಪ್ರೇಮದ ಸಂಕೇತಗಳಾಗಿರುತ್ತವೆ.

ಹೆಂಡತಿ ಗಂಡನ ಹೆಸರನ್ನು ಬಹುವಚನದಲ್ಲಿ ಗೌರವ ಸೂಚಕ ಶಬ್ದಗಳೊಂದಿಗೆ ಅಷ್ಟೇ ಅಲ್ಲ ದೇವರ ರಾಜರ ಮಟ್ಟಕ್ಕೆ ಹೋಲಿಸಿ ಹೇಳುತ್ತಾಳೆ. ಕೂಡಿದ ಜನರಲ್ಲಿ ಹೆಸರು ಹೇಳಲು ನಾಚಿಕೆಯಾಗುವದರಿಂದ ಈ ಒಡಪುಗಳು ಆ ಹೆಸರುಗಳಿಗೆ ಪೀಠಿಕೆಗಳಾಗುತ್ತವೆ. ಒಡಪುಗಳಲ್ಲಿ ಒಲವಿರುತ್ತದೆ. ಹೆಸರು ಹೇಳುವಾಗ ಗೆಲುವು ಆಗುತ್ತದೆ. ಅದನ್ನು ಹೇಳುವವರಿಗಿಂತ ಹೆಚ್ಚಾಗಿ ಕೇಳುಗರಿಗೆ ಮೋಜೆನಿಸುತ್ತದೆ.

೭ ಕಥೆಗಳಲ್ಲಿ ಹಾಸ್ಯ

ಜಾನಪದ ಕ್ಷೇತ್ರದಲ್ಲಿ ಕಥೆಯ ಪ್ರಕಾರವು ಎಲ್ಲರ ಗಮನ ಸೆಳೆದುಕೊಂಡಿದೆ. ಅವುಗಳನ್ನು ವೈಜ್ಞಾನಿಕ ದೃಷ್ಟಿಕೋನದಿಂದ ಅಭ್ಯಾಸಗೈಯುತ್ತಿದ್ದಾರೆ. ಕಥೆಗಳ ಅಭ್ಯಾಸ ಪಾಶ್ಚಾತ್ಯರಲ್ಲಿಯೂ ಕುತೂಹಲ ಕೆರಳಿಸಿವೆ. ಅವುಗಳ ಹುಟ್ಟು, ಮೂಲ, ಕಾಲ, ದೇಶ, ಭಾಷೆ, ಮುಂತಾದವುಗಳನ್ನು ಅವಲೋಕಿಸಿ ತಮ್ಮದೇ ಆದ ಸಿದ್ಧಾಂತಗಳನ್ನು ಸಾರಿದ್ದಾರೆ. ಅವರ ಸಿದ್ಧಾಂತಗಳಲ್ಲಿ ವರ್ಗೀಕರಣಕ್ಕೆ ಸಂಬಂಧಿಸಿದ ಮಾದರಿ (Type) ಮತ್ತು ಆಶಯ (Motif)

ವಿಧಾನ ಹೆಚ್ಚು ಪ್ರಸಿದ್ಧಿಯನ್ನು ಪಡೆದಿದೆ. ಇದನ್ನು ರೂಪಿಸಿದವರು ಆಂಟ್ವಿ ಆರ್ನೆ ಮತ್ತು ಸ್ಟಿತ್‌ಥಾಂಪ್ಸನ್ ಎಂಬ ಪಾಶ್ಚಾತ್ಯ ವಿದ್ವಾಂಸರು.

'ಆಶಯ' ಎಂಬುದು ಕಥೆಯ ವಸ್ತುವನ್ನು ಕುರಿತದ್ದು. 'ಮಾದರಿ' ಎಂಬುದು ಕಥೆಯ ತಾಂತ್ರಿಕ ಸ್ವರೂಪವನ್ನು ಕುರಿತದ್ದು. ಬೃಹತ್ ಪ್ರಮಾಣದ ಕಥೆಗಳನ್ನು ವರ್ಗೀಕರಣಕ್ಕೆ ಒಳಗುಮಾಡಿ ಆಶಯ ಸೂಚಿ (Motif Index) ಹಾಗೂ ಮಾದರಿ (Type Index) ತಯಾರಿಸುತ್ತಾರೆ. ಇದರಿಂದಾಗಿ ಕಥೆಗಳ ಅಧ್ಯಯನ ಸುಲಭವಾಗುತ್ತದೆ.

ಕಥೆಗಳು ಅತಿಮಾನುಷ, ಅದ್ಭುತ, ಸಾಹಸ, ಒಗಟು, ಪ್ರಾಣಿ, ನೀತಿ, ಹಾಸ್ಯ- ಹೀಗೆ ಹಲವಾರು ವಿಷಯಗಳನ್ನು ಒಳಗೊಂಡಿರುತ್ತವೆ. ಕಥೆಗಳು ಗದ್ಯ-ಪದ್ಯಗಳೆರಡರಲ್ಲೂ ವ್ಯಕ್ತವಾಗಿವೆ. ಬಾಯಿಂದ ಬಾಯಿಗೆ ಹರಿದು ಬರುವಾಗ ಅವು ಹಲವಾರು ಬದಲಾವಣೆಗಳನ್ನು ಹೊಂದಿರುತ್ತವೆ. ಈ 'ರೂಪಾಂತರ'ವು ಕಥೆಯ ಪ್ರಮುಖ ಗುಣವಾದರೂ ಅದು ಮೂಲ ಸ್ವರೂಪವನ್ನು ಕಳೆದುಕೊಂಡಿರುವದಿಲ್ಲ.
ಅದರ ಉದ್ದೇಶಕ್ಕೆ ಧಕ್ಕೆ ತಗಲಿರುವದಿಲ್ಲ.

ಜೀವನದಲ್ಲಿ 'ಕಥೆ' ಪ್ರಮುಖ ಪಾತ್ರವಹಿಸುತ್ತದೆ. 'ಸತ್ಯವನ್ನು' ನುಡಿಯಬೇಕೆಂಬುದು ಒಂದು ನೀತಿ. ಯಾರಿಗಾದರೂ ಸತ್ಯ ನುಡಿಯಲು ಉಪದೇಶಿಸಿದರೆ ಅದು ರುಚಿಸಲಾರದು. ಅಷ್ಟೊಂದು ಪ್ರಭಾವ ಬೀರಲಾರದು. ಅದೇ ಸತ್ಯ

ನುಡಿಯುವದಕ್ಕೆ ಒಂದು ದೃಷ್ಟಾಂತ ಹೇಳಿದರೆ ಆದೀತು. ಸತ್ಯಕ್ಕಾಗಿ ಹರಿಶ್ಚಂದ್ರನ ಕಥೆ ಹೇಳಿದರೆ ಅದು ಅವನ ಮೇಲೆ ಪ್ರಭಾವ ಬೀರುತ್ತದೆ. ಹೀಗಾಗಿ ಧರ್ಮ ಪ್ರಸಾರಕ್ಕಾಗಿಯೇ ಹಲವಾರು 'ಕಥಾಕೋಶ'ಗಳು ಹುಟ್ಟಿಕೊಂಡಿವೆ.

ಕತ್ತಲಾಗುತ್ತಲೇ ಮನೆಯ ಮುಂದೆ ಮುದುಕಿಯೊಬ್ಬಳು ಮೊಮ್ಮಕ್ಕಳನ್ನು ಆಡಿಸುತ್ತ ಕೂಡ್ರಿಸಿಕೊಂಡು ಹೇಳುವ ಕಥೆಗಳು 'ಅಜ್ಜಿಯ ಕಥೆ'ಗಳೆಂದೇ ಹೆಸರಾಗಿವೆ. ಶೇಂಗಾ ಹರಿಯುವಾಗ, ಕಳೆಕೀಳುವಾಗ, ಕಾಳು ಹಸನ ಮಾಡುವಾಗ ಮುಂತಾದ ಸಾಮೂಹಿಕ ಕೆಲಸಗಳಲ್ಲಿ ಕಾಲ ಕಳೆಯುವದಕ್ಕೆ ಹಾಡುವದರ ಜೊತೆಗೆ ಕಥೆಗಳನ್ನು ಒಬ್ಬರಿಗೊಬ್ಬರು ಹೇಳುವ ರೂಢಿಯಿದೆ.

ಜನಪದಕಥೆಗಳಲ್ಲಿ ನಾಯಕನಾದವನು ಏಳು ಸಮುದ್ರಗಳನ್ನು ದಾಟಬಹುದು. ಸಮುದ್ರದಾಳಕ್ಕೆ ಇಳಿದು ರತ್ನ ತರಬಹುದು. ಹತ್ತು ಹುಲಿಗಳ ಕತ್ತನ್ನು ಒಬ್ಬನೇ ಹಿಚುಕಬಹುದು. ದೇವಲೋಕಕ್ಕೆ ಹೋಗಿ ದೇವರೊಂದಿಗೆ ಮಾತಾಡಬಹುದು. ಕಥೆ ಕಲ್ಪಿತವಾದರೂ ಅವುಗಳಲ್ಲಿ ಅದ್ಭುತ ರಮ್ಯತೆ, ರಂಜಕತೆ ಇರುತ್ತದೆ. ಮನರಂಜನೆಗೆ ಮುಖ್ಯ ಆಧಾರವೆನಿಸುತ್ತದೆ. ಪ್ರಾಣಿಗಳು ಸಹ ಸಾಹಸದ ಕೆಲಸ ಮಾಡುವ ಮೂಲಕ ಕಥೆಯಲ್ಲಿ ಸೇರಿಕೊಂಡಿವೆ. ಬದುಕಿನಲ್ಲಿ ಅಸಾಧ್ಯವಾದುದು ಕಥೆಗಳಲ್ಲಿ ಸಾಧ್ಯವಾಗುತ್ತದೆ. ಹೀಗಾಗಿ ಅವು ಕುತೂಹಲ ಕೆರಳಿಸುತ್ತವೆ.

ಬರೀ ಅದ್ಭುತ, ಸಾಹಸ, ಅತಿಮಾನುಷ, ನೀತಿ ಪ್ರಾಣಿಕಥೆಗಳು ಎಷ್ಟು ರಂಜಿಸಿಯಾವು? ಕುತೂಹಲ ಕೆರಳಿಸಿ ಬಿಡಬಹುದು. ಆದರೆ ಅದೇ ಹಾಸ್ಯಭರಿತ ಕಥೆ ಹೇಳಿದರೆ ಕುತೂಹಲವಷ್ಟೇ ಅಲ್ಲ, ಅದರ ಜೊತೆಗೆ ನಗೆಯೂ ಬರುವದು.

ಹಾಸ್ಯಭರಿತ ಕಥೆಗಳ ಮೂಲ ಉದ್ದೇಶ ಮನಸ್ಸನ್ನು ರಂಜಿಸುವದು, ನಗಿಸುವದು. ಇವುಗಳ ಗಾತ್ರ ಚಿಕ್ಕದಾಗಿದ್ದು ಹಾಸ್ಯದ ಜೊತೆಗೆ ನೀತಿಯನ್ನು ಸಾರಬಹುದಾಗಿವೆ. ದೈನಂದಿನ ಜೀವನ-ವ್ಯಕ್ತಿ ಘಟನೆಗಳನ್ನು ಕುರಿತಾಗಿರುತ್ತವೆ. ದಡ್ಡ, ದರಿದ್ರ, ಮೂರ್ಖ, ಸ್ಥೂಲಕಾಯ, ಸೋಮಾರಿ, ಮುಂತಾದ ವ್ಯಕ್ತಿಗಳ ಮೇಲೆ ಹೆಚ್ಚು ಕಥೆಗಳು ರಚಿತವಾಗಿವೆ. ಹೀಗಾಗಿ ಇವು ಹೆಚ್ಚು ಜನಪ್ರಿಯತೆಯನ್ನು ಪಡೆಯುತ್ತವೆ.

ಒಂದೂರಿನಲ್ಲಿ ಒಬ್ಬ ದಾಸಯ್ಯನಿರುತ್ತಾನೆ. ನಿತ್ಯಭಿಕ್ಷೆ ಮಾಡಿ ಹಿಟ್ಟು ತಂದು ಹೆಂಡತಿಗೆ ಕೊಡುತ್ತಾನೆ. ಹಿಟ್ಟು ತಿಂದು ಅವಳಿಗೆ ಬೇಸರವಾಗಿ ದೋಸೆ ತಿನ್ನುವ ಆಸೆಯಾಗಿ ಗಂಡನಿಗೆ ಹೇಳುತ್ತಾಳೆ. ಗಂಡ ಯೋಚಿಸಿ ಅಕ್ಕಿ-ಎಣ್ಣೆ-ಇತ್ಯಾದಿ ತರಲು ಒಂದು ಉಪಾಯ ಹುಡುಕುತ್ತಾನೆ.

ತನ್ನ ಧೋತರಕ್ಕೆ ಮೇಣಹಚ್ಚಿಕೊಂಡು ಕಿರಾಣಿ ಅಂಗಡಿಗೆ ಹೋಗಿ ಅಲ್ಲಿ ಅಕ್ಕಿ ಚೀಲದ ಮೇಲೆ ಕುಳಿತು ಅದು -ಇದು ಮಾತಾಡಿ ಮನೆಗೆ ಬಂದು ಧೋತರ ಜಾಡಿಸುತ್ತಾನೆ. ಸೇರು ಅಕ್ಕಿಯಾಗುತ್ತವೆ. ಮರುದಿನ ದೊಡ್ಡದಾದ

ರುಂಬಾಲು ಸುತ್ತಿ ಮತ್ತೆ ಕಿರಾಣಿ ಅಂಗಡಿಗೆ ಹೋಗಿ ಎಣ್ಣೆ ಡಬ್ಬ ಹಚಿಕಿ ಹಾಕಿ ರುಂಬಾಲು ಅದ್ದಿಸಿಕೊಂಡು ಮನೆಗೆ ಬಂದು ಹಿಂಡುತ್ತಾನೆ. ಹೆಂಡತಿ ಆ ಅಕ್ಕಿ-ಎಣ್ಣೆಯಿಂದ ಮೂರು ದೋಸೆಮಾಡಿ ತನಗೆ ಎರಡು, ಗಂಡನಿಗೆ ಒಂದು ಎನ್ನುತ್ತಾಳೆ. ಗಂಡ ತನಗೆ ಎರಡು ನಿನಗೆ ಒಂದು ಎನ್ನುತ್ತಾನೆ. ಆಕೆ ಅದಕ್ಕೆ ಒಪ್ಪದಿರಲು ಆತ ಒಂದು ಉಪಾಯ ಹೂಡುತ್ತಾನೆ. ಯಾರು ಮೊದಲು ಮಾತನಾಡುತ್ತಾರೆ ಅವರಿಗೆ ಒಂದು, ಉಳಿದವರಿಗೆ ಎರಡು ಎನ್ನುತ್ತಾನೆ. ಇಬ್ಬರೂ ಒಪ್ಪಿ ಮೌನವ್ರತ ಪ್ರಾರಂಭಿಸುತ್ತಾರೆ. ಓಣಿಯ ಜನ ಗಾಬರಿಯಾಗಿ ಎರಡು-ಮೂರು ದಿನಗಳಿಂದ ದಾಸಯ್ಯ ದಂಪತಿಗಳನ್ನು ಕಾಣದೇ ಮನೆಹೊಕ್ಕು ನೋಡುತ್ತಾರೆ. ಇಬ್ಬರೂ ಶವದಂತೆ ಕುಳಿತಿದ್ದಾರೆ. ಅವರಿಬ್ಬರೂ ಸತ್ತಿದ್ದಾರೆಂದು ತಿಳಿದು ಜನರು ಸಂಸ್ಕಾರಕ್ಕೆ ಸಿದ್ಧಗೊಳಿಸುತ್ತಾರೆ. ಮೊದಲು ಮುತ್ತೈದಿ ಸಾವೆಂದು ಹೆಂಡತಿಯ ಸಂಸ್ಕಾರ ನಡೆಸಲು ನಿರ್ಧರಿಸಿ ಅವಳನ್ನು ಎತ್ತುತ್ತಲೇ ಆಕೆ ಮೂಕಳಾಗಿದ್ದವಳು ಒಮ್ಮೆಲೇ ಜೀವಭಯದಿಂದ ಮಾತನಾಡುತ್ತಾಳೆ. ತಕ್ಷಣ ಗಂಡ ನನಗೆ ಎರಡು ದೋಸೆ ನಿನಗೆ ಒಂದು ದೋಸೆ ಎನ್ನುತ್ತ ಓಡಿಹೋಗಿ ಎರಡು ದೋಸೆ ತಿಂದು ಹೆಂಡತಿಗೊಂದು ತಂದು ಕೊಡುತ್ತಾನೆ. ಇವರ ದೋಸೆ ಆಸೆಯ ಉಪಾಯ ಕಂಡು ಜನ ನಕ್ಕು ಹೋಗುತ್ತಾರೆ.

ಈ ಕಥೆ ಕೇಳಿದಾಗ ದಾಸಯ್ಯ ದೋಸೆ ಆಸೆಗಾಗಿ ಹುಡುಕಿದ ಉಪಾಯವನ್ನು ಕಂಡು ನಗು ಬಾರದೆ ಇರುತ್ತ

ದೆಯೇ? ಇಂಥಆಸೆ, ಅನೀತಿಗೆ ಶಿಕ್ಷೆ, ಮೂರ್ಖತನ, ಹೆಡ್ಡತನ ಕುರಿತು ಜನಪದ ಕಥೆಗಳು ಸಾಕಷ್ಟು ಹುಟ್ಟಿಕೊಂಡಿವೆ. ಮಕ್ಕಳು ಹಾಸ್ಯದ ಕಥೆ ಕೇಳಿ ದೊಡ್ಡದಾಗಿ ನಕ್ಕರೆ ದೊಡ್ಡವರು ಚಿಕ್ಕದಾಗಿಯಾದರೂ ನಗುತ್ತಾರೆ. ಪುರಾಣ ವಾಚನ, ಕೀರ್ತನೆ, ಭಾಷಣ ಮುಂತಾದ ಪ್ರಸಂಗಗಳಲ್ಲಿ ಬೇಸರ ಬರದಿರಲೆಂದು ಕೇಳುಗರನ್ನು ಇಂಥ ಕಥೆಗಳ ಮೂಲಕ ನಗಿಸಿ ಮುಂದುವರಿಯುತ್ತಾರೆ.

೮ ಶಿಶು ಪ್ರಾಸಗಳಲ್ಲಿ ಹಾಸ್ಯ

ಜಾನಪದ ಸಂಗ್ರಹದ ಜೊತೆಗೆ ಅದರ ಅಭ್ಯಾಸವನ್ನು ಇತ್ತೀಚಿಗೆ ಪ್ರಾರಂಭಿಸಿದ್ದೇವೆ. ಆದರೆ ಇನ್ನೂ ಜಾನಪದ ಶಿಶುಸಾಹಿತ್ಯದ ಬಗೆಗೆ ಅಷ್ಟೊಂದು ಗಮನ ಹರಿಸಿಲ್ಲ. ಒಂದಿಬ್ಬರು ವಿದ್ವಾಂಸರಿಂದ ಆ ಕಾರ್ಯ ನಡೆದಿದೆಯಾದರೂ ಅದಿನ್ನೂ ಪೂರ್ಣಪ್ರಮಾಣಕ್ಕಿಳಿದಿಲ್ಲ. ಹೀಗಿದ್ದಾಗ ಶಿಶುಸಾಹಿತ್ಯದ ಬಗೆಗೆ ಕಂಡುಕೊಳ್ಳುವದು, ಅದರ ಬಗೆಗೆ ಮಾತಾಡುವದು ಸಾಧುವಲ್ಲವೆಂದು ಭಾವಿಸುವಂತಿಲ್ಲ. ಆದರಿಷ್ಟೇ, ನವ ನಾಗರಿಕತೆಯಿಂದಾಗಿ ಜಾನಪದ ಸಾಹಿತ್ಯ ಕ್ಷೇತ್ರ ಕುಂಠಿತಗೊಳ್ಳುತ್ತಿದೆಯೆಂಬ ಅಭಿಪ್ರಾಯದ ಆಧಾರದ ಮೇಲೆ ನಮ್ಮ ಬಾಲಕರು 'ಮಮ್ಮಿ,' 'ಡ್ಯಾಡಿ' ನುಡಿಯುವ ಮೊದಲೇ ಆ ಸಾಹಿತ್ಯದ ಸಂರಕ್ಷಣೆ ಅಗತ್ಯವಾಗಿದೆ. ಆದರೂ ಕಾನ್ವೆಂಟಿಗೆ ಹೋದ ಮಕ್ಕಳು ಕೆನಡಾಕ್ಕೆ ಹೋಗುವರೆಂಬ ಭರವಸೆಯು ಈಗ ಆ ಕಾನ್ವೆಂಟ ಶಾಲೆಗಳಲ್ಲೂ ಉಳಿದಿಲ್ಲ. ಕನ್ನಡ ಶಾಲೆಗೆ

ಹೋದ ಮಕ್ಕಳು ಕಾರಕೂನಿಕೆ ಮಾಡುತ್ತಾರೆಂಬ ನಿರಾಸೆಯೂ ಈಗ ಮಾಯವಾಗಿದೆ.

ಬಾಲಕರು ತಮ್ಮ ವಯೋಮಾನಕ್ಕೆ ತಕ್ಕಂತೆ ಆಡುತ್ತಾರೆ, ಮಾತನಾಡುತ್ತಾರೆ. ಅವರು ಆಡಿದ್ದೇ ಆಟವಾಗಿದೆ. ಮಾತನಾಡಿದ್ದೇ ಸಾಹಿತ್ಯವಾಗಿದೆ. ಅವರ ಸಾಹಿತ್ಯದ ಸವಿಯುಣ್ಣಬೇಕಾದರೆ ನಾವೂ ಸಹ ಬಾಲ ವಯಸ್ಸು ಮನದವರಾದಾಗಲೇ ಮಾತ್ರ ಸಾಧ್ಯ.

ಪ್ರಾಸಬದ್ಧವಾಗಿ ರಚನೆಗೊಂಡ ಅವರ ಸಾಹಿತ್ಯ ಕೇವಲ ಶ್ರಾವಕವಲ್ಲ. ಆಡುವ ಆಟಗಳಿಗೆ ಅದು ಪೂರಕವಾಗಿರುತ್ತದೆ. ಆಟಕ್ಕೆ ತಕ್ಕಂತೆ ಕೈಕಾಲುಗಳು ಕೆಲಸ ನಡೆಸಿದರೆ ಬಾಯಿಂದ ಪದ್ಯಗಳ ಪದಗಳು ಕುಣಿಯುತ್ತವೆ. ವಿಶೇಷಾರ್ಥ ವಿರದಿದ್ದರೂ ಮನರಂಜನೆಗೆ ತಕ್ಕ ಪದ್ಯಗಳಾಗಿರುತ್ತವೆ.

ಮನೆಯಲ್ಲಿ ಅಜ್ಜಿ ಒಲೆಯ ಮುಂದೆ ಕುಳಿತು ಕುಡಿಕೆಯಲ್ಲಿ ಗೆಣಸನ್ನು ಕುಚ್ಚಿ ಹೊರತೆಗೆದು ಅದರ ಮೇಲಿನ ಹೊದಿಕೆಯನ್ನು ಬಿಡಿಸುತ್ತಿದ್ದಾಳೆ. ಮಗು ಹೊರಗಿನಿಂದ ಒಳಗೆ ಓಡಿಬರುತ್ತದೆ. ಕುಚ್ಚಿದ ಗೆಣಸನ್ನು ಅಜ್ಜಿ ಮಗುವಿಗೆ ತಿನ್ನಲು ಕೊಡುತ್ತಾಳೆ. ಮಗು ಗೆಣಸನ್ನು ಹಾಗೆಯೇ ತಿನ್ನುವದಿಲ್ಲ.

ಯವ್ವಾಯವ್ವಾ ಗೆಣಸ ಕೊಡು
ಕುಡಿಕ್ಯಾಗ ಹಾಕಿ ಕುದಿಸಿಕೊಡು

ಹೀಗೆ ಹಾಡುತ್ತ-ಕುಣಿಯುತ್ತ ಅಜ್ಜಿಯನ್ನು ನಗಿಸಿ ತಾನೂ ನಗುತ್ತ ಮಗು ತಿನ್ನುತ್ತದೆ. ಇಂಥ ನೂರಾರು ಪ್ರಾಸಗಳು ಕೇಳಲು ಮಧುರವಾಗಿರುತ್ತವೆ.

ತೆಲಿಮ್ಯಾಗ ಸಜ್ಜಿ
ನಿಮ್ಮವ್ವ ಗೊಜ್ಜಿ...
ಕೈಯ್ಯಾಗ ರೊಟ್ಟಿ
ನಿಮ್ಮವ್ವ ಜಿಟ್ಟಿ......

ಇಂಥ ಪ್ರಾಸಗಳಲ್ಲಿ ಅರ್ಥವಿರದಿದ್ದರೂ ಅದೊಂದು ರೀತಿಯ ಜೋಡಣೆ ಆಶ್ಚರ್ಯವನ್ನುಂಟು ಮಾಡುತ್ತದೆ. ಜೊತೆಗೆ ಸಹಜ ನಗೆಯೂ ಬರುತ್ತದೆ. ಮಕ್ಕಳು ಅನುಕರಣಶೀಲರು. ತಂದೆ ಬೀಡಿ ಸೇದಿದರೆ ಅದನ್ನು ಮಗು ಕದ್ದು ಅನುಸರಿಸುವ ಸಾಧ್ಯತೆಯಿದೆ. ತಾಯಿ ರೊಟ್ಟಿ ತಟ್ಟುತ್ತಿದ್ದರೆ ಮಗಳೂ ತಟ್ಟಲು ಹವಣಿಸುತ್ತಾಳೆ. ಕಾರಣ ಕೆಟ್ಟ ಪ್ರಭಾವ ಬೀರುವ ದಕ್ಕಿಂತ ಒಳ್ಳೆಯದನ್ನು ಕಲಿಸುವದು ಮಕ್ಕಳ ಒಳಿತಿಗಾಗುತ್ತದೆ. ಮಕ್ಕಳ ಮನಸ್ಸು ನಿಷ್ಕಲ್ಮಶವಾದುದರಿಂದ ಬಹು ಎಚ್ಚರಿಕೆಯ ಪರಿಪಾಠವನ್ನು ಹಾಕಬೇಕಾಗುವದು.

ಮದುವೆಯನ್ನು ಕಂಡು ಬಂದ ಮಕ್ಕಳು ತಾವು ಒಟ್ಟುಗೂಡಿ "ಮದುವೆ ಆಟ" ಆಡುತ್ತಾರೆ. ಅವರದೇ ಆದ ಪ್ರಪಂಚದಲ್ಲಿ ಯಾರೋ ಗಂಡ ಹೆಂಡಿರು ಆಗುತ್ತಾರೆ. ಉಳಿದವರು ಅಕ್ಕಿಕಾಳು ಹಾಕುತ್ತಾರೆ. ಮದುವೆಯ ನಂತರ ಗಂಡ ಹೆಂಡಿರಾಗುವವರು ಬಾಳುವೆ ಬಡಿದಾಟ ನಡೆಸುತ್ತಾರೆ.

ಇದನ್ನು ಕಂಡಾಗ ಬಲು ಮೋಜೆನಿಸುತ್ತದೆ. ಮತ್ತೆ ಮಕ್ಕಳಲ್ಲಿಯೇ ಹಿರಿಯರಿದ್ದು ದಂಪತಿಗಳಿಗೆ ದಾರಿ ಸುಗಮಗೊಳಿಸುತ್ತಾರೆ.

ಶಾಲೆ ಕಲಿಯುವ ಮಕ್ಕಳು ಪ್ರಪಂಚಜ್ಞಾನವನ್ನು ಎಷ್ಟೊಂದು ತಿಳಿದುಕೊಂಡಿದ್ದಾರೆ ಎಂಬುದಕ್ಕೆ ಈ ಕೆಳಗಿನ ಪದ್ಯವೇ ಸಾಕ್ಷಿಯಾಗುತ್ತದೆ.

ಕನ್ನಡ ಸಾಲೆಯು ಉಪ್ಪಿಟ್ಟು
ಮಾಸ್ತರಿಗೆಲ್ಲಾ ಇಷ್ಟಿಷ್ಟು
ಹುಡುಗರಿಗೆಲ್ಲಾ ಇಟೀಟು !

ಇಲ್ಲಿ ತಮ್ಮ ಗುರುವಿನ ಆಸೆಬುರುಕತನವನ್ನು ಎತ್ತಿ ತೋರಿಸುವ ಮಕ್ಕಳು ಅಲ್ಪೋಪಹಾರದ ಅವ್ಯವಸ್ಥೆಯನ್ನು ಸ್ಪಷ್ಟವಾಗಿ ತಿಳಿಸಿದ್ದಾರೆ. ಕೈಸನ್ನೆ ಮೂಲಕ 'ಇಷ್ಟಿಷ್ಟ' ಎಂದಾಗ ಸಾಕಷ್ಟು ಎಂತಲೂ 'ಇಟೀಟು' ಎಂದಾಗ ಸ್ವಲ್ಪವೆಂದೂ ಅವರು ಹಾಡುವ ರೀತಿ ಮಾಸ್ತರರಿಗೆ ಕೋಪಬರಿಸಿದರೆ, ಉಳಿದವರಿಗೆಲ್ಲಾ ಹರುಷವನ್ನುಂಟು ಮಾಡುತ್ತದೆ. ಸಾಮಾಜಿಕ ಪ್ರಜ್ಞೆಯನ್ನು ಬಾಲಕರು ತಮ್ಮದೇ ಆದ ಭಾಷೆ-ಭಾವನೆಗಳನ್ನು ಹೇಗೆ ಅಭಿವ್ಯಕ್ತಿಗೊಳಿಸಿದ್ದಾರೆ—ಎಂಬುದನ್ನು ಇಲ್ಲಿ ಗಮನಿಸಬೇಕು.

ಜಾನಪದದಲ್ಲಿ ಬಾಲಕರ ಕಥೆ, ಹಾಡು, ಆಟ, ಮುಂತಾದವುಗಳ ಅಭ್ಯಾಸ ಹಾಗೂ ಸಂಗ್ರಹ ತ್ವರಿತಗೊಳ್ಳಬೇಕು. ಜಾನಪದದಲ್ಲಿ ಪ್ರೌಢರ ಸಾಹಿತ್ಯಕ್ಕೆ ಕೊಡುವ

ಗಮನವನ್ನು ಜಾನಪದ ಶಿಶುಸಾಹಿತ್ಯಕ್ಕೂ ಕೊಡಬೇಕು. ಅಂದಾಗಲೇ ಅದರ ಮಹತ್ವವು ಗೊತ್ತಾಗುತ್ತದೆ.

೯ ಬಯಲಾಟಗಳಲ್ಲಿ ಹಾಸ್ಯ

ಬಯಲಾಟವು ಒಂದು ಸಂಯುಕ್ತ ಕಲೆ. ಸಂಗೀತ-ಸಾಹಿತ್ಯ-ಅಭಿನಯ-ನೃತ್ಯ-ಮಾತು-ಮುಂತಾದ ಕಲೆಗಳು ಇದರಲ್ಲಿ ಮಿಳಿತವಾಗಿರುತ್ತವೆ. ಇವುಗಳಲ್ಲಿ ಯಾವುದಾದರೊಂದನ್ನು ಬಿಟ್ಟರೆ ಅದು ಬಯಲಾಟವಾಗದು. ಆದುದರಿಂದ ಇದೊಂದು "ಸಂಕ್ಷಿಪ್ತ ಜಾನಪದ ವಿಶ್ವಕೋಶ'' ಎಂದು ಕರೆದರೆ ಅತಿಶಯೋಕ್ತಿಯಾಗಲಾರದು.

ಜಾನಪದದ ಪ್ರಮುಖ ಅಂಗವಾದ ಇದರಲ್ಲಿ ಎರಡು ಪ್ರಕಾರಗಳಿವೆ. ಒಂದು ಮೂಡಲಪಾಯ ಇನ್ನೊಂದು ಪಡುವಲಪಾಯ. ಕ್ರಮವಾಗಿ ಇವಕ್ಕೆ ದೊಡ್ಡಾಟ-ಯಕ್ಷಗಾನ ಎಂದು ಕರೆಯುತ್ತಾರೆ. ಯಕ್ಷಗಾನ ಬಯಲಾಟವೆನಿಸಿದರೂ ಅದರ ಪ್ರೌಢಿಮೆ ದೃಷ್ಟಿಯಿಂದ ಅದು ಜಾನಪದವಹೌದೋ ಅಲ್ಲವೋ ಎಂಬುದು ನಿರ್ಣಯವಾಗಿಲ್ಲ. ಆದರೆ ದೊಡ್ಡಾಟ ಮಾತ್ರ ಸಂಪೂರ್ಣ ಜಾನಪದ ಆಟವಾಗಿದೆ.

ದೊಡ್ಡಾಟದಲ್ಲಿ ಮತ್ತೆ ಉಪಪ್ರಕಾರಗಳಿವೆ. ಇಡೀ ಆಟವನ್ನೇ ಬಾಯಿಪಾಠ ಒಪ್ಪಿಸುವ 'ಕತೆಗಾರ'ರೂ ಇದ್ದಾರೆ. ಅವರ ಸ್ಮರಣಶಕ್ತಿ ಅಗಾಧವಾದದ್ದು. ಓದು-ಬರಹ ಕಲಿತವರು ಸಹ ನಿರಕ್ಷರಿಗಳಷ್ಟು ಸ್ಪಷ್ಟ ಬಾಯಿಪಾಠ ಸಾಧಿಸುವದು ಸಾಧ್ಯವಾಗಲಿಕ್ಕಿಲ್ಲ. ಹೆಚ್ಚಾಗಿ ರಾಮಾಯಣ-

ಮಹಾಭಾರತ ಘಟನೆಗಳು, ಅವುಗಳಲ್ಲಿ ಬರುವ ಉಪಕಥೆಗಳನ್ನು ಆಧರಿಸಿ—ಬಟ್ಟಿನಲ್ಲಿ ಬಯಲಾಟವೆಂದರೆ ಪೌರಾಣಿಕ ಎಂಬ ರೀತಿಯಲ್ಲಿ ಅವು ರಚಿತವಾಗಿವೆ. ಕೆಲವೊಂದು ಐತಿಹಾಸಿಕ-ವ್ಯಕ್ತಿ-ಘಟನೆಗಳು ಬಯಲಾಟಗಳಲ್ಲಿ ಮೂಡಿ ಬಂದಿವೆ.

ಬಯಲಾಟದಲ್ಲಿ ರೌದ್ರ, ಕರುಣ, ಹಾಸ್ಯ ರಸಗಳೇ ಪ್ರಮುಖ. ರೌದ್ರವು ಮಾತು ಹೇಳಿ ಪ್ರೇಕ್ಷಕರನ್ನು ಗಂಭೀರವಾಗಿರಿಸಬಹುದು. ಕರುಣರಸದಿಂದ ಕಣ್ಣೀರು ಸುರಿಸಬಹುದು. ಹಾಸ್ಯರಸದಿಂದ ಸದಾ ನಗಿಸುತ್ತಿರಬಹುದು. ಒಮ್ಮೊಮ್ಮೆ ಅಜಾತುರ್ಯದಿಂದ ಬರೀ ಹಾಸ್ಯರಸವೇ ಹರಿಯಬಹುದು.

ಇಡೀ ರಾತ್ರಿಯನ್ನೆಲ್ಲ ಆಟಕ್ಕೆ ಉಪಯೋಗಿಸುವುದರಿಂದ ನೋಡುವವರಿಗೆ ನಿದ್ದೆ ಬರದಿರಲೆಂದು ಹಾಸ್ಯ ಚಟಾಕಿಗಳನ್ನು ಹಾರಿಸಿ ಎಚ್ಚರಿಸುತ್ತಾರೆ. ಆಟದುದ್ದಕ್ಕೂ ಕಥೆಗಾರ, ಸಾರಥಿ, ಸೂತ್ರದಾರ, ದೂತಿ—ಮುಂತಾದ ಪಾತ್ರಗಳು ಆ ಕೆಲಸ ಮಾಡುತ್ತಾರೆ. ಆಧುನಿಕ ಪೌರಾಣಿಕವಾಗಿ, ಪೌರಾಣಿಕ ಆಧುನಿಕವಾಗಿ ಅವರ ಕೈಯ್ಯಲ್ಲಿ ಬದಲಾಯಿಸುತ್ತವೆ. ನಿತ್ಯ ಜೀವನದ ಘಟಕಗಳನ್ನು, ಎದುರಿನಲ್ಲಿಯೇ ಕುಳಿತ ಪ್ರೇಕ್ಷಕರನ್ನು ತಮ್ಮ ಹಾಸ್ಯಕ್ಕೆ ವಸ್ತುವಾಗಿಸಿಕೊಂಡು ರಂಗಮಂದಿರದಲ್ಲಿ ಹಾಸ್ಯ ಹೊಸೆದು ಎಸೆಯುತ್ತಾರೆ. ಬಟ್ಟಿನಲ್ಲಿ, ಹಾಸ್ಯಪಾತ್ರಗಳು ಶ್ಲೀಲ–

ಅಶ್ಲೀಲಗಳ ಭಯವಿಲ್ಲದೆ ಮಾತಿನ ಚಾತುರ್ಯದಿಂದ ಹಾಸ್ಯ ವಾತಾವರಣ ನಿರ್ಮಿಸುತ್ತಾರೆ.

ದೊಡ್ಡಾಟದ ಮಾತುಗಳು ಹೆಚ್ಚಾಗಿ ಪ್ರಾಸಪ್ರಿಯರಿಂದ ರಚಿತವಾದವುಗಳು. ಶಬ್ದಗಳಲ್ಲಿ ಅಲ್ಪಪ್ರಾಣಾಕ್ಷರವಿದ್ದರೂ ಉಚ್ಚರಿಸುವಾಗ ಅದು ಮಹಾಪ್ರಾಣಾಕ್ಷರವಾಗುವದು. ಉಸಿರುಹಿಡಿದು ವಾಕ್ಯಪೂರ್ಣಗೊಳಿಸಿದಾಗಲೇ ಅದಕ್ಕೆ ಗಂಭೀರತೆ, ಪಾತ್ರಗಳ ರೌದ್ರತೆ ಹೆಚ್ಚು ಪರಿಣಾಮಕಾರಿಯಾಗಿರುತ್ತದೆ. ಹಾಸ್ಯಪಾತ್ರ ಮಾತ್ರ ಇದಕ್ಕೆ ಅಪವಾದ. ಮುಖ್ಯಪಾತ್ರ ರಂಗಭೂಮಿಯಲ್ಲಿ ರೌದ್ರಮಯ ವಾತಾವರಣ ರೂಪಿಸಿದರೆ, ಕ್ಷಣಾರ್ಧದಲ್ಲಿ ಅದರ ಅಣಕವೆಂಬಂತೆ ಹಾಸ್ಯಪಾತ್ರಗಳ ಬಾಯಿಂದ ಮಾತುಗಳನ್ನು ಕೇಳಿದರೆ ನಗುವಿನ ವಾತಾವರಣ ನಿರ್ಮಿತವಾಗುತ್ತದೆ.

ಪ್ರತಿಪಾತ್ರಗಳ ಪ್ರತಿಯೊಂದು ಮಾತುಗಳು ಅಂತ್ಯದಲ್ಲಿ ಪ್ರಾಸಯುಕ್ತವಾಗಿರುವದಲ್ಲದೇ ಅಲ್ಲಿ ನವಿರಾದ ಹಾಸ್ಯ ಅಡಗಿರುತ್ತದೆ. ಕೇಳಲು ಕರ್ಣಮಧುರವಾಗಿರುವವು. ಉದಾ:

ಸಾರಥಿ...ಛಂದವಾಗಿ ಹೇಳಬೇಕು ದೊರೆಯೇ
ಹೇ ಕರ್ಪೂರದ ಉರಿಯೇ.
ಗಣಪತಿ...ವಿಘ್ನೇಶ್ವರನೆಂದು ತಿಳಿಯಲ್ಲೈ ಸಾರಥಿ
ನೀ ಬಲು ಹೊಲಸು ನಾರತಿ

ದೇವಾಧಿದೇವತೆಗಳು ಸಾರಥಿಯ ಕೈಯಲ್ಲಿ ಸಿಕ್ಕು ಥರಥರ ನಡುಗಬೇಕು. ಹಾಗೆ ಅವರುಗಳು ಆತನ ಅಣುಕದ

-ಲಘುತರ ಮಾತುಗಳಿಗೆ ಬಲಿಯಾಗಿ ಮುಖ್ಯ ಪಾತ್ರಧಾರಿ ಮೊದಲುಮಾಡಿ ಮೂಕಪ್ರೇಕ್ಷಕರೂ ನಗುತ್ತಾರೆ. ಶಕುನಿಯ ಗುಣವನ್ನು ತಿಳಿದ ಸಾರಥಿ ಆತನನ್ನು ನರಿಯ ಗುಣಕ್ಕೆ ಹೋಲಿಸುತ್ತಾನೆ.

ಶಕುನಿ..ನಿನ್ನ ಹೆಸರೇನು ಧೀರಾ
ಗುಣ ಗಂಭೀರಾ
ಸಾರಥಿ..ನಾನು ಸಾರಥಿ. ತಾವು ಛಂದವಾಗಿ
ಹೇಳಬೇಕು ದೊರೆಯೇ
ಮೆಕ್ಕಿ ಜ್ವಾಳದಾನ ನರಿಯೇ.

ಹೀಗೆ ಸಾರಥಿಯ ಪ್ರತಿಮಾತಿನಲ್ಲಿ ಹಾಸ್ಯ ಅಡಕ ವಾಗಿರುತ್ತದೆ. 'ಶ್ರೀಕೃಷ್ಣಪಾರಿಜಾತ'ದಲ್ಲಿ ದೂತಿಗಳ ಹಾಸ್ಯ ವಂತೂ ಅತಿಯಾಗಿರುತ್ತದೆ. ಹಾಲು ಮಾರುವ ಗೊಲ್ಲತಿಯ ಜೊತೆಗೆ ಮಾತನಾಡುವ ದೂತಿ ಮತ್ತೆಮತ್ತೆ ಅಶ್ಲೀಲ ಬೆರೆ ಸಿದರೂ ಅದು ನಗುವಿನ ಚಿಲುಮೆಯಾಗುತ್ತದೆ. ಚುಟುಕಾದ ಮಾತುಗಳ ಪ್ರಶ್ನೋತ್ತರಗಳು ಕೇಳಲು ಹಿತಕರವಾಗಿರು ತ್ತವೆ. ಅದರಂತೆ 'ಸಂಗ್ಯಾ-ಬಾಳ್ಯಾ' ಸಣ್ಣಾಟದಲ್ಲಿಯೂ ಹಾಸ್ಯ ಬೆಸಗೊಂಡಿದೆ.

ಬಯಲಾಟದ ಹಾಸ್ಯಕ್ಕಿಂತಲೂ ಬಯಲಾಟ ಆಡುವವರ ಸ್ವಾರಸ್ಯ ಬಹಳ ಮೋಜಿನದಾಗಿರುತ್ತದೆ. ಮೂರು – ನಾಲ್ಕು ತಿಂಗಳುಗಳ ವರೆಗೆ 'ತಾಲೀಮು' ಹಚ್ಚಿರುತ್ತಾರೆ. ನಿತ್ಯವೂ ಅದಕ್ಕಾಗಿ ಸೇರುವ ಮನೆಯಲ್ಲಿ ಒಂದಿಲ್ಲೊಂದು ಸ್ವಾರಸ್ಯದ ಘಟನೆಗಳು ನಡೆಯುತ್ತವೆ. ಆಟದ ದಿನ ದನಿ ಕಳೆದು

ಕೊಂಡಾರೆಂದು ವಿಶೇಷ ಭೋಜನ, ಶುಂಠಿ ಕಷಾಯು ಸೇವಿಸು ತ್ತಾರೆ. ಮುಗ್ಧ ಮನಸ್ಸಿನ ಜಾನಪದರಲ್ಲಿ ಆಟದ ಬಗೆಗೆ ನಿಷ್ಠೆಯಿರುತ್ತದೆ. ಅದೊಂದು ದೇವರ ಸೇವೆಯೆಂದೇ ಬಗೆದು ಪೂಜ್ಯ ಭಾವನೆಯಿಂದ ಗ್ರಾಮದೇವರ ಉತ್ಸವದಂದು ಅಟ್ಟ ಕಟ್ಟಿ ಆಟ ಆಡುತ್ತಾರೆ.

ಇತ್ತೀಚಿಗಂತೂ ಬಯುಲಾಟ ಬಯಲಿನೊಳು ಲೀನವಾ ಗಿದೆ. 'ಸಾಮಾಜಿಕ ನಾಟಕ' ಗಳೆಂದು ಕರೆಯುವ ನಾಟಕ ಗಳಲ್ಲಿ ಅಶ್ಲೀಲವೇ ಮುಖ್ಯವಾಗಿ ಎದ್ದು ಕಾಣುತ್ತಿದೆ. ಆಟ ಗಳಲ್ಲಿ ಕಲೆಯಿರದೇ ಯಾವುದೋ ಮನೋಭಿಲಾಷೆ ಇರು ತ್ತದೆ. ಇದು ಬಯಲಾಟಗಳ ದುರಂತ ಎಂದರೂ ತಪ್ಪಾಗ ಲಾರದು. ಇನ್ನು ಹಳೆಯ ತಲೆಮಾರಿನ ಜನ ತಮ್ಮ ಬಯ ಲಾಟದ ಸವಿ ಆಟಗಳನ್ನು ನೆನಪು ಹೇಳಿ ಇಂದಿನ ಸಾಮಾಜಿಕ ತಿರಸ್ಕರಿಸುತ್ತಲಿದ್ದಾರೆ. ಅಂಥವರಿಂದ ಸಾಧ್ಯವಿದ್ದ ಬಯಲಾಟ ಅನುಭವ, ಮುಂತಾದವುಗಳನ್ನು ಸಂಗ್ರಹಿಸುವದು ಅಗತ್ಯವಾಗಿದೆ.

೧೦ ಸಮಾರೋಪ

ಈ ವರೆಗೆ ಜನಪದ ಸಾಹಿತ್ಯದ ಒಂದೊಂದೇ ಪ್ರಕಾರ ಗಳನ್ನು ತೀರಾ ಸಂಕ್ಷಿಪ್ತವಾಗಿ ಅದೂ ಹಾಸ್ಯದ ದೃಷ್ಟಿಕೋನ ದಿಂದ ಕಂಡದ್ದಾಗಿದೆ. ಜಾನಪದ ಕ್ಷೇತ್ರವನ್ನು "ಸಾಗರ ಸಮಾನ" ಎಂದು ಹೇಳುತ್ತಿರುವಾಗ, ಆ ಸಾಗರದಾಳದಲ್ಲಿ ಕಣ್ಣಿಗೆ ಕಂಡ ಮುತ್ತುಗಳನ್ನು ಎತ್ತಿಕೊಳ್ಳಲಾಗಿದೆ. ಒಂದು ದೃಷ್ಟಿಯಿಂದ ಹೇಳುವದಾದರೆ ಇಲ್ಲಿ ಹಾಸ್ಯದ ಹೊರವೈ ಅಷ್ಟನ್ನೇ ಸಹಜಾವಲೋಕನಗೈಯ್ಯಲಾಗಿದೆ. ಸಂಶೋಧನೆ

-ಪ್ರೌಢತೆ ವಿಚಾರ ಬಿಟ್ಟು ಸರಳ ಹಾಗೂ ನೇರ ಮಾರ್ಗ ಹಿಡಿದು ನಡೆದುದಾಗಿದೆ.

ಜನಪದರ ಬದುಕು ಹಾಗೂ ಅವರ ಸಾಹಿತ್ಯ ಒಂದು ರೀತಿಯ ನಿರಂತರವಾದ ಅಧ್ಯಯನ ವಸ್ತುಗಳಾಗಿವೆ. ಬರೀ ಹಾಸ್ಯದ ದೃಷ್ಟಿಯಿಂದ ನೋಡಿದರೆ ಸಾಲದು, ಅವರ ಹಾಸ್ಯದ ಹಿಂದೆ ಅಡಗಿರುವ ಹಸಿವು-ಬಡತನ, ರೋಗ-ರುಜಿನಗಳ, ಸಾವು - ನೋವುಗಳ, ದುಃಖ-ದುಮ್ಮಾನಗಳ ದುರಂತ ಭೂತಾಕಾರದಲ್ಲಿವೆ. ಆ ರೀತಿಯ ಅನುಭವಗಳಿಗೆ ಸಾಕ್ಷಿಯಾಗಿ ಅವರ ಹೃದಯಾಂತರಾಳದಿಂದ ಹಾಡು-ಕಥೆ-ನಾಟಕಗಳು ಹುಟ್ಟಿಕೊಂಡಿವೆ. ಅಂಥ ಸಾಹಿತ್ಯಿಕ ಪ್ರಕ್ರಿಯೆಯನ್ನು ಸೂಕ್ಷ್ಮವಾಗಿ ಅವಲೋಕಿಸಿದರೆ ಅಲ್ಲಿ ಪ್ರತಿಭಟನೆ ಕಡಿಮೆಯಿದ್ದು ನೋವನ್ನುಂಡು ಬದುಕಿರುವಂತೆ ಕಾಣುತ್ತದೆ. ಆದರೂ ಅದರಲ್ಲಿಯೇ ನಲಿವನ್ನು ಕಂಡಿದ್ದಾರೆ. ನೋವಿನ ನರಳುವಿಕೆಯಲ್ಲಿಯೇ ನಕ್ಕಿದ್ದಾರೆ. ಜೊತೆಗೆ ಇತರರನ್ನು ನಗಿಸಿದ್ದಾರೆ.

ಆ ನಗುವಿನಲ್ಲಿ ವಿಷಾದದ ಛಾಯೆಯಿದೆ. ಅಸಹಾಯಕ ಭಾವನೆಯಿದೆ. ಜೀವನದ ಜಿಗುಪ್ಸೆಯಿದೆ. ಇಷ್ಟಿದ್ದರೂ ಅವರು ಆಶಾರಹಿತರಾಗಿಲ್ಲ. ದೈವದ ಭರವಸೆಯನ್ನು ನಂಬಿ ಬದುಕಿದ್ದಾರೆ. ಆದುದರಿಂದಲೇ ಅವೆಲ್ಲವನ್ನು ಮರೆತು ನಿರ್ಮಲ ಮನಸ್ಕರಾಗಿ ಮುಗುಳ್ನಕ್ಕು ಮುನ್ನಡೆದಿದ್ದಾರೆ.

ಒಬ್ಬನ ಮಾತು, ನಡತೆ, ಉದ್ಯೋಗ–ಒಟ್ಟಿನಲ್ಲಿ ಅವನ

ಬದುಕು ಮತ್ತೊಬ್ಬನಿಗೆ ನಗೆಯೆನಿಸಬಹುದು. ಆ ನಗುವಿಗೆ ಕಾರಣವಾದ ವಸ್ತುಸ್ಥಿತಿಯನ್ನು ಅರಿತರೆ ಅಲ್ಲಿ ನಗು ಮಾಯವಾಗಿ ಸಹಾನುಭೂತಿ ಹುಟ್ಟುತ್ತದೆ. ಅದನ್ನು ಅರ್ಥಮಾಡಿಕೊಳ್ಳದೆ ಹೋದರೆ ಅದು ಅಪಹಾಸ್ಯವಾಗುವದು. ಹಾಸ್ಯವೆಂದೂ ಅಪಹಾಸ್ಯಕ್ಕಿಳಿಯಬಾರದು. ಸರಸದಿಂದೊಡಗೂಡಿರಬೇಕು.

ಜನಪದ ಸಾಹಿತ್ಯದಲ್ಲಿ ಅಪಹಾಸ್ಯಕ್ಕೆ ಸ್ಥಾನವಿಲ್ಲವೆಂದರೂ ಆದೀತು. ಸರಸಮಯ ಹಾಸ್ಯವನ್ನೇ ಆಧರಿಸಿ ಹಾಡು–ಕಥೆ–ಒಗಟು ಇತ್ಯಾದಿ ಪ್ರಕಾರಗಳಲ್ಲಿ ತಮ್ಮ ರಸಿಕ ಭಾವನೆಯನ್ನು ವ್ಯಕ್ತಗೊಳಿಸಿದ್ದಾರೆ. ಒಗಟುಗಳಲ್ಲಿ ಅಶ್ಲೀಲದ ಹೊದಿಕೆ ಕೇವಲ ಮನರಂಜನೆಗಾಗಿ. ಆದರೆ ಅದನ್ನು ಕೀಳೆಂದು ಭಾವಿಸುವದು ತಪ್ಪು. ಮುಚ್ಚುಮರೆಯಿಲ್ಲದ ನೈಜ ಬದುಕಿನ ಹಿನ್ನಲೆಯಲ್ಲಿ ಅವು ರಚಿತವಾಗಿರುತ್ತವೆ. ಸಂಕೋಚವೆನಿಸಿದರೂ ಆಶ್ಚರ್ಯಕರ ರೀತಿಯಲ್ಲಿ ಅವು ರೂಪಗೊಂಡಿರುತ್ತವೆ. ಹೀಗಾಗಿ ಜನಪದ ಸಾಹಿತ್ಯದಲ್ಲಿ ಶ್ಲೀಲ–ಅಶ್ಲೀಲಗಳೆಂದು ಭೇದಿಸುವದಿಲ್ಲ.

ಕಾಯಕನಿರತ ಜಾನಪದರು ದಣಿವಾರಿಸಿಕೊಳ್ಳಲು, ಮಾನಸಿಕ ಸ್ವಾದಕ್ಕಾಗಿ ಹಾಡಿಕೊಂಡರು. ಬರಿ ಕಥೆ ಕಟ್ಟಿ ಹಾಡಿದರೆ ಅದು ಮತ್ತೂ ಬೇಸರ ತರಬಹುದು. ಆಗಾಗ ಹಾಸ್ಯದ ಚುಟುಕುಗಳನ್ನು ಕಟ್ಟಿ ಹಾಡಿದಾಗ ಗಂಭೀರತೆಯು ಕಟ್ಟೊಡೆದು ನಗುವಿನ ಹೊಳೆ ಹರಿಯುತ್ತದೆ. ಮನಸ್ಸು ಎಷ್ಟೋ ಪ್ರಫುಲ್ಲಿತವಾಗುತ್ತದೆ. ಆದುದರಿಂದ ಹಾಸ್ಯದ ಬೆಲೆ

ಏನೆಂಬುದು ಖಚಿತವಾಗುತ್ತದೆ. ಹಾಸ್ಯದಿಂದ ಹರೆಯುಕ್ಕುತ್ತಿದೆಯೆಂದರೂ ಅತಿಶಯೋಕ್ತಿಯಾಗಲಿಕ್ಕಿಲ್ಲ.

ಹಾಸ್ಯದ ಹೊನಲು ಹರಿದರೆ ಹೊಟ್ಟೆ ಹುಣ್ಣಾಗುವಂತೆ ನಗಬಹುದು. ಹಸಿದ ಹೊಟ್ಟೆಗೆ ಹಾಸ್ಯ ಆಧಾರವಾಗಬಹುದು. ಬಾಳ ಬೆಳಕಿಗೆ ಹಾಸ್ಯ ಆಧಾರವಾಗಬಹುದು. ಇದನ್ನರಿತ ಜಾನಪದರು ಹಾಸ್ಯಕ್ಕೆ ಪ್ರಮುಖಸ್ಥಾನವನ್ನು ಕೊಟ್ಟಿದ್ದಾರೆ. ಅವರ ಹಾಸ್ಯದ ಬಾಳನ್ನು ಡಾ. ಬಿ. ಎಸ್. ಗದ್ದಗಿಮಠ ಅವರು ಈ ರೀತಿ ವರ್ಣಿಸಿದ್ದಾರೆ "ಹಳ್ಳಿಗರ ಈ ದುಡಿಮೆಯ ಬಾಳಿನಲ್ಲಿ ಹಾಸ್ಯವು ಒಂದು ವಿಶ್ರಾಂತಿ. ದಣಿವಾರಿಸಲು ರಸಭರಿತವಾದ ಹಾಡುಗಳನ್ನಲ್ಲದೆ. ಆಗಾಗ ಹಾಸ್ಯದ ಕೋಲ್ಮಿಂಚುಗಳ ಬೆಡಗನ್ನು ಹಾಡಿನೊಳಗೆ ಕೂಡಿಸಿ ದುಡಿಯುವವರನ್ನವರು ನಿಂತಲ್ಲಿಯೇ ತಣಿಸಬಲ್ಲರು. ಹಾಸ್ಯವು ರಸಾತ್ಮಕ ಜೀವಿಗೆ ತಂಗೊಳದ ತಾವರೆಗೆ ಬೆಳಗಿನ ಹೂಬಿಸಿಲು. ಅದರೊಂದಿಗೆ ಜೀವವೂ ಅರಳುವದಲ್ಲದೆ, ಸುತ್ತಮುತ್ತಲಿನ ಜೀವನವೂ ಅರಳಿ ಕಾಲುಕಾಲು ನಕ್ಕು ಮೈದೋರುವದು ನಕ್ಕುಂಡ ಜೀವನವೇ ಜೀವನ"೧

ಬದುಕನ್ನು ಅರ್ಥಮಾಡಿಕೊಂಡವ ಹಾಸ್ಯವನ್ನು ಅರ್ಥಮಾಡಿಕೊಳ್ಳುತ್ತಾನೆ. ಸುಮ್ಮನೆ ನಕ್ಕು ಅಪಹಾಸ್ಯಕ್ಕೀಡು ಆಗಬಾರದು. ಅಪಮಾನಗೈದು ಅಪಹಾಸ್ಯಗೈಯ್ಯಬಾರದು. ಅದು ನಗುವನ್ನು ತರಿಸಿದರೂ ಅನುಭವಿಸುವ ಸುಖ ತರುವದಿಲ್ಲ. ಆದುದರಿಂದ ಉತ್ತಮಮಟ್ಟದ ಹಾಸ್ಯ ಉತ್ತಮ ಬದುಕು ಹಾಗು ಆರೋಗ್ಯಕ್ಕೆ ಅವಶ್ಯಕ. ಹಾಸ್ಯ

೧ ಕನ್ನಡ ಜಾನಪದ ಗೀತಗಳು ಬಿ. ಎಸ್. ಗದ್ದಗಿಮಠ ಪು. ೫೫.

ವನ್ನು ರಸಾತ್ಮಕ ದೃಷ್ಟಿಯಿಂದ ಅನುಭವಿಸುವ ಭಾವನಾತ್ಮಕ ಬುದ್ಧಿ ಮೊದಲು ಬೇಕು.[೧]

'ಜಾನಪದ ಸಾಹಿತ್ಯದಲ್ಲಿ ಹಾಸ್ಯ'ದ ಬಗೆಗೆ ಪ್ರತ್ಯೇಕ ಅಧ್ಯಯನ ಅವಶ್ಯಕವಾದುದು. ಇದು ಅಧ್ಯಯನವಲ್ಲ. ತೀರಾ ಸಂಕ್ಷೇಪ್ತ ರೀತಿಯಲ್ಲಿ ಅವಲೋಕನಗೈಯ್ಯಲಾಗಿದೆಯೆಂದು ಮೊದಲೇ ಹೇಳಲಾಗಿದೆ. ಇಲ್ಲವಾದರೆ ಇದು ಅಪಹಾಸ್ಯಕ್ಕೆ ಗುರಿಯಾದೀತು.

ಜಾನಪದದ ತಿಳುವಳಿಕೆ ಬಂದಮೇಲೆ ಅದರ ಸಂಗ್ರಹ ಸಂಕಲನ ಸಂಪಾದನ ಸಾಹಿತ್ಯವಿಮರ್ಶೆ ಕಾರ್ಯಗಳು ನಡೆದಿವೆ. ಈ ವರೆಗಾದ ಸಂಗ್ರಹ ಕಾಲುಭಾಗ ಮಾತ್ರ ಎನ್ನಬಹುದು. ಆದರ ಆಳ ವಿಸ್ತಾರ ಅಳತೆಗೆ ನಿಲುಕಲು ಅಸಾಧ್ಯವಾದರೂ ಇದ್ದುದರ ರಕ್ಷಣೆ ಅವಶ್ಯ. ಅಂಥ ಕೆಲಸ ನಡೆದಿದೆಯಾದರೂ ಈ ವರೆಗೂ ತಕ್ಕ ಪುರಸ್ಕಾರ ಸಿಗಬೇಕಾಗಿದೆ. ಜಾನಪದ ಪ್ರಜ್ಞೆ ಕಾಳಜಿ ಇರುವವರಿಂದ ಆ ಕೆಲಸ ನಡೆಯಬೇಕಾಗಿದೆ.

ಜಾನಪದವೆಂದರೆ ಹಿಂದೂ ಮೂಗು ಮುರಿದಿದ್ದಾರೆ. ಈಗಲೂ ಇದ್ದಾರೆ. ಆದರೆ ಈಗ 'ಸೊಸೆಗೊಂದು ಕಾಲ' ಎಂಬಂತೆ ಜಾನಪದಕ್ಕೊಂದು ಕಾಲ ಬಂದಿದೆ. ವಿಶ್ವವಿದ್ಯಾಲಯ ಮಟ್ಟದಲ್ಲಿ ಅಧ್ಯಯನ ಸಂಶೋಧನೆಗಳು ನಡೆಯುತ್ತಿವೆ. ಜೊತೆಗೆ ಭಾರತೀಯ ಇತರ ಭಾಷೆಗಳ ಜಾನಪದ ಸಾಹಿತ್ಯ ಕಲೆಗಳೊಂದಿಗೆ ಕನ್ನಡ ಜಾನಪದದ ತೌಲನಿಕ ಅಧ್ಯಯನ ಪ್ರಾರಂಭವಾಗಬೇಕು. ಪರಸ್ಪರ ಭಾಷೆಗಳಲ್ಲಿ ಅನುವಾದ ಕಾರ್ಯವಾದಾಗ ಅದರಲ್ಲಿರುವ ವೈವಿಧ್ಯತೆಯನ್ನು ಕಾಣುತ್ತೇವೆ.

ಗ್ರಂಥ ಋಣ

೧. ಗರತಿ ಹಾಡು-

೨. ಜಾನಪದ ಸ್ವರೂಪ -ಡಾ. ಹಾ. ಮಾ. ನಾಯಕ.

೩. ಭಾರತೀಯ ಜಾನಪದ ಸಮೀಕ್ಷೆ-ದುರ್ಗಾಭಾಗವತ್

೪. ಜಾನಪದ ಸಾಹಿತ್ಯ ಸಮೀಕ್ಷೆ -ಡಾ. ಜೀ. ಶಂ. ಪರಮಶಿವಯ್ಯ.

೫. ಸಂಯೋಜಕ ಸರ್ವಜ್ಞ - ಬಿ.ಎಂ. ಹೊರಕೇರಿ.

೬. ಜಾನಪದ ವಿಹಾರ - ಕ್ಯಾತನಹಳ್ಳಿ ರಾಮಣ್ಣ.

೭. ಜನಪದ ಕಥೆಗಳು-ಡಾ. ಎಲ್. ಆರ್. ಹೆಗಡೆ.

೮. ಮಲ್ಲಿಗೆ ದಂಡೆ-

೯. ಕನ್ನಡ ಜಾನಪದ ಗೀತಗಳು - ಡಾ. ಬಿ. ಎಸ್. ಗದ್ದಗಿಮಠ.

೧೦. ಹಂತಿ ಹಾಡುಗಳು -ಡಾ. ಎಂ. ಎಸ್. ಲಠ್ಠೆ.

---

kup/wd 773/5,000/30-3-82

ಉಪನ್ಯಾಸ ಗ್ರಂಥಮಾಲೆಯ ಇತ್ತೀಚಿನ ಪ್ರಕಟನೆಗಳು

೧ ಸಾಂಸರ್ಗಿಕ ರೋಗಗಳು ಮತ್ತು ಅವುಗಳನ್ನು ತ
ಗಟ್ಟುವ ಕ್ರಮಗಳು

—ಪಿ.ಎಸ್ ಬಣಕಾರ

೨ ಪ್ರಾಚೀನ ಭಾರತದಲ್ಲಿಯ ವಿದ್ಯಾಕೇಂದ್ರಗಳು

—ಅನಂತ ಕುಲಕರ್ಣಿ

೩. ಗಾದೆಗಳಲ್ಲಿ ಆರೋಗ್ಯ

—ಪಿ. ಎಸ್. ಶಂಕರ

೪ ಚಟಗಳು ರೂಢಿಗಳು ಮತ್ತು ಕ್ಯಾನ್ಸರ

—ಎಸ್. ಜಿ. ನಾಗಲೋಟಿಮಠ

೫ ಸಿಡುಬುರೋಗ

—ಬಿ. ಟಿ. ತುಕೋಳ

೬ ರಂಗಭೂಮಿಯ ನಟಸಾರ್ವಭೌಮ ಸಿದ್ರಾಮಪ್ಪ
ಹಂದಿಗನೂರ

—ಬಿ. ಆರ್. ನಾಡಗೌಡ

೭ ಮೋಕ್ಷಗುಂಡಂ ವಿಶ್ವೇಶ್ವರಯ್ಯ

—ಶಿವಕುಮಾರ ಪಾಟೀಲ

೮ ತ್ರಿವೇಣಿಯವರ ಕಾದಂಬರಿಗಳು

—ವಿಜಯಶ್ರೀ ಸಬರದ

೯ ದಾಸಸಾಹಿತ್ಯ ಹಾಗೂ ಸಾಮಾಜಿಕ ಮೌಲ್ಯಗಳು

—ಇಲ್ಲೂರು ಜಯರಾಮಪ್ಪ

೧೦ ಸರ್ವೋದಯ ಹಾಗೂ ಜನಕಲ್ಯಾಣ

—ಎಂ.ಎಸ್.ಬಡಕಲಿ

ಪ್ರಸಾರಾಂಗ

ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ-೫೮೦ ೦